ನವಸಾಕ್ಷರ ಪುಸ್ತಕ ಮಾಲೆ ೬೯

ಮೈಲಾರನ ಜಾತ್ರೆ

ಎಸ್. ಎಸ್. ಹಿರೇಮಠ್



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೬೯

ಮೈಲಾರನ ಜಾತ್ರೆ

ಎಸ್. ಎಸ್. ಹಿರೇಮಠ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

MYLARANA JATRE : By S. S. Hiremath. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು – ೫೬೦ ೦೦೪.

ಮೈಲಾರನ ಜಾತ್ರೆ

ಪ್ರಿಯ ಓದುಗರೆ,

ನನ್ನ ಹಾಗೆ ನೀವೂ ಕೂಡ ಮೈಲಾರನ ಜಾತ್ರೆಯನ್ನು ನೋಡಿರಬೇಕೆಂದು ಭಾವಿಸುತ್ತೇನೆ. ಜಾತ್ರೆ ಎಂದ ತಕ್ಷಣ ಯಾರಿಗೆ ಸಂತೋಷವಾಗುವುದಿಲ್ಲ? ಪ್ರತಿಯೊಬ್ಬರೂ ಒಂದಿಲ್ಲೊಂದು ಸಂದರ್ಭದಲ್ಲಿ ಒಂದಿಲ್ಲೊಂದು ಜಾತ್ರೆಯಲ್ಲಿ ಪಾಲ್ಗೊಂಡಿರುವುದು ಸಹಜ. ಜಾತ್ರೆಯ ಸುಖ-ಸಂತೋಷಗಳನ್ನು ಸವಿದಿರುವುದೂ ಸತ್ಯ. ಆದರೆ ಜಾತ್ರೆಯ ಬಗ್ಗೆ ಬರೆಯಲು- ಓದಲು ಕೂತ ಕೂಡಲೆ ಜಾತ್ರೆ ಎಂದರೇನು? ಅದು ಯಾವಾಗ, ಯಾಕೆ ಹುಟ್ಟಿರಬಹುದು, ಹೆಣ್ಣು ದೇವರ ಜಾತ್ರೆಗೂ, ಗಂಡು ದೇವರ ಜಾತ್ರೆಗೂ ವ್ಯತ್ಯಾಸವಿದೆಯೆ, ಶಿಷ್ಟ-ಪರಿಶಿಷ್ಟ ದೇವರುಗಳ ಜಾತ್ರೆಗಳಲ್ಲಿ ಅಂತರವಿದೆಯೆ? ಇವೇ ಮೊದಲಾದ ಹಲವು ಹತ್ತು ಪ್ರಶ್ನೆಗಳು ನಮಗೆ ಎದುರಾಗುತ್ತವೆ. ಮತ್ತು ಇಂಥ ಪ್ರಶ್ನೆಗಳಿಗೆ ಉತ್ತರ ಪಡೆದುಕೊಳ್ಳಲು ನಾವು ಪ್ರಯತ್ನಿಸುವುದು ಅಗತ್ಯವಿದೆ.

ನಮ್ಮ ನಾಡಿನಲ್ಲಿ ಜಾತ್ರೆಗಳು ನಡೆಯಲಾರದ ಒಂದೂ ಊರು ಇರಲಿಕ್ಕೆ ಸಾಧ್ಯವಿಲ್ಲ ಎನಿಸುತ್ತದೆ. ಪ್ರತಿವರ್ಷ ತಪ್ಪದೆ ನಡೆಯುವ ಜಾತ್ರೆಗಳು; ಹಲವು



ಮೈಲಾರನ ಜಾತ್ರೆ - ಜನಗಳ ಬಿಡಾರ

ವರ್ಷಕ್ಕೆ ಒಮ್ಮೆ ನಡೆಯುವ ಜಾತ್ರೆಗಳು, ಸಣ್ಣವು, ದೊಡ್ಡವು, ಸ್ತ್ರೀ ದೇವತೆಗಳಿಗೆ ಸಂಬಂಧಪಟ್ಟವು, ಪುರುಷ ದೇವತೆಗಳಿಗೆ ಸಂಬಂಧಪಟ್ಟವು, ಹೀಗೆ ಹಲವಾರು ಪ್ರಭೇದಗಳನ್ನು ಕಾಣುತ್ತೇವೆ.

ನಮ್ಮ ನಾಡಿನಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಅಪಾರ ಸಂಖ್ಯೆಯ ಜನ ಸೇರಿ ಮಾಡುವ, ಗಂಡು ದೇವರ ಜಾತ್ರೆಗಳಲ್ಲಿ ಮೈಲಾರಲಿಂಗನ ಜಾತ್ರೆ ಪ್ರಮುಖವಾಗಿದೆ.

ನಾನು ಈಗ ಹೇಳಲಿರುವ ಮೈಲಾರ ಕ್ಷೇತ್ರ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಮಣ್ಣು ಮೈಲಾರಕ್ಕೆ ಸಂಬಂಧಿಸಿದೆ. ಊರ ಪಕ್ಕಕ್ಕೆ ತುಂಗಭದ್ರಾ ನದಿ ಹರಿಯುತ್ತಿದೆ. ಅದರಾಚೆ ಧಾರವಾಡ ಜಿಲ್ಲೆ ಪ್ರಾರಂಭವಾಗುತ್ತದೆ. ರಾಣಿಬೆನ್ನೂರು ತಾಲೂಕಿನ ಮೈಲಾರಗುಡ್ಡದಲ್ಲಿ ಇದೇ ಮೈಲಾರಲಿಂಗನ ಇನ್ನೊಂದು ಪ್ರಸಿದ್ಧವಾದ

ದೇವಾಲಯವಿದೆ. ಅಲ್ಲಿಯೂ ದೊಡ್ಡ ಜಾತ್ರೆ ನಡೆಯುತ್ತದೆ. ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಅಷ್ಟೇ ಅಲ್ಲ, ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿಯೂ ಮೈಲಾರನ ಕ್ಷೇತ್ರಗಳಿವೆ. ಹೀಗೆ ಹಲವಾರು ಕಡೆ ಒಂದೇ ದೇವರ ಕ್ಷೇತ್ರಗಳಿರಲಿಕ್ಕೆ ಕಾರಣವೇನು? ಈ ದೇವರನ್ನು ಆರಾಧಿಸುವ ಜನರು ಒಂದೇ ಪ್ರದೇಶದಲ್ಲಿ ನೆಲೆಯೂರದೆ, ಆಗಾಗ ವಲಸೆ ಬಂದಿರುವರು. ಅವರು ಬಂದು ನೆಲೆಯೂರಿದಲ್ಲೆಲ್ಲ ತಮ್ಮ ಆರಾಧ್ಯ ದೈವವನ್ನು ಪ್ರತಿಷ್ಠಾಪಿಸುತ್ತಾ ಬಂದರು. ಅಂದರೆ ಅವರು ಯಾವ ಕಡೆಯಿಂದ ಹೇಗೆ ಬಂದರು ಎಂಬುದನ್ನು ಇದರಿಂದ ಗುರುತಿಸಲು ಸಾಧ್ಯವಾಗುತ್ತದೆ. ನಮಗಿಲ್ಲಿ ತಿಳಿದಿರುವಂತೆ ಮೈಲಾರಲಿಂಗನನ್ನು ನಂಬಿರುವ ಆರಾಧಿಸುವ ಭಕ್ತರು ಎಲ್ಲ ಜಾತಿಗಳಲ್ಲಿಯೂ ಇದ್ದಾರೆ. ಲಿಂಗಾಯತ, ಬ್ರಾಹ್ಮಣರನ್ನು ಒಳಗೊಂಡು, ಉಳಿದೆಲ್ಲ ಜಾತಿಗಳ ಜನರೂ ಮೈಲಾರನ ಒಕ್ಕಲುಗಳಾಗಿದ್ದಾರೆ. 'ಒಕ್ಕಲು', ಗಳಾಗಿರುವುದರಿಂದ ತಪ್ಪದಂತೆ ಮೈಲಾರನಿಗೆ 'ನಡಕೊಳ್ಳುತ್ತಾರೆ'. ಆದರೂ ಈ ಎಲ್ಲ ಭಕ್ತರಲ್ಲಿ ಕುರುಬರು ಮೈಲಾರನ ಪ್ರಧಾನ ಆರಾಧಕರು.. ಮೈಲಾರ ಅವರ ದೇವರು. ಅವರು ಕಂಡುಕೊಂಡ ದೇವರು, ಅವರು ಸೃಷ್ಟಿಸಿದ ದೇವರು.

ಈ ಕುರುಬರು ಯಾವಾಗ, ಹೇಗೆ ಮೈಲಾರ ಕ್ಷೇತ್ರಗಳನ್ನು ಸ್ಥಾಪಿಸುತ್ತ ಬಂದರು? ಹೆಚ್ಚಾಗಿ ನದಿ ದಂಡೆ, ಗುಡ್ಡದ ಓರೆ, ವಿಸ್ತಾರವಾದ ಬಯಲುಗಳ ಪಕ್ಕದ ಮರಡಿಗಳ ಹತ್ತಿರವೆ ಮೈಲಾರನ ಕ್ಷೇತ್ರಗಳಿರುವುದಕ್ಕೆ ಕಾರಣವೇನು?

ಕುರುಬರು ಪಶುಪಾಲಕರು. ಮೂಲದಲ್ಲಿ ಅವರು ಒಕ್ಕಲಿಗರಾಗಿರಲಿಲ್ಲ. ಒಕ್ಕಲುತನವನ್ನು ಅವರು ಇಲ್ಲಿ ಮೊದಲೇ ನೆಲೆಸಿದ್ದ ಬೇರೆ ಜನಾಂಗದಿಂದ ಕಲಿತರು. ಅದೆಲ್ಲ ಬೇರೆ ಕಥೆ. ಆದರೆ ಪಶುಪಾಲಕರಾಗಿ ಬರುತ್ತಿದ್ದ ಕುರುಬರಿಗೆ ಪ್ರಶಸ್ತವಾದ ಸ್ಥಳಗಳು (ಹುಲ್ಲುಗಾವಲಿರುವ ಮತ್ತು ನೀರಿನ ಸೌಕರ್ಯವಿರುವ) ಎಲ್ಲಿ ಎದುರಾದವೊ, ಅಲ್ಲೆಲ್ಲ ಅವರು ನೆಲೆಗೊಳ್ಳುತ್ತ ಬಂದರು ಎಂದು ಇಲ್ಲಿ ತಿಳಿದುಕೊಂಡರೆ ಸಾಕು.

ಅಗೋ ನೋಡಿ. ಸಾಲುಗಟ್ಟಿಗೊಂಡು ಸಡಗರದಿಂದ ಮೈಲಾರ ಜಾತ್ರೆಗೆ ಹೊರಟಿರುವ ಬಂಡಿಗಳನ್ನು. ಅವು ಒಂದೇ ಊರಿನವಲ್ಲ, ಒಂದೇ ಪ್ರದೇಶದವಲ್ಲ; ಹಲವು ಹತ್ತು ದಿಕ್ಕಿನಿಂದ ತುಂಗಭದ್ರೆಗೆ ನೆರೆ ಬಂದಂತೆ ಹರಿದು ಬರುತ್ತಿವೆ. ಜನರ ಸಂತೋಷಕ್ಕೆ ಪಾರವಿಲ್ಲ. ಮಕ್ಕಳು, ಯುವಕರು, ಯುವತಿಯರು, ಹಿರಿಯರು, ಮುಪ್ಪಿನವರು, ಹೀಗೆ ಎಲ್ಲ ವಯಸ್ಸಿನ ಗಂಡಸರು ಹೆಂಗಸರು, ಅಂದಚಂದದ ಬಟ್ಟೆ ತೊಟ್ಟು, ಒಪ್ಪ-ಓರಣದಿಂದ ಬರುತ್ತಿದ್ದಾರೆ.

ಬಯಲು ಸೀಮೆಯಲ್ಲಿ ಸುಗ್ಗಿಗಳು ಮುಗಿದು ರೈತರಿಗೆ ಕೂಲಿಕಾರರಿಗೆ ಕೆಲಸಗಳು ಹಗುರಾಗಿರುವ ಕಾಲವಲ್ಲವೆ ಇದು? ದುಡಿದು ಕೂಡಿಟ್ಟುಕೊಂಡ ಗಂಟನ್ನು ಕರಗಿಸಲಿಕ್ಕೆ ಈ ಜಾತ್ರೆಗೆ ಹೊರಟಿದ್ದಾರಲ್ಲವೆ? ಪ್ರತಿವರ್ಷವೂ ತಪ್ಪದಂತೆ ಸಾಗರದೋಪಾದಿಯಲ್ಲಿ ಮೈಲಾರಕ್ಕೆ ಬಂದು ಸೇರುವ ಈ ಜನರ ನಂಬಿಕೆ ಎಷ್ಟು ಅಗಾಧವಾದುದು! ಯಾವ ಸೆಳೆತ ಇವರನ್ನು ಹೀಗೆ ಬಂದು ಸೇರುವಂತೆ ಮಾಡುತ್ತಿದೆ?

ಹುಡುಕುವ ಕಣ್ಣನ್ನು ತೆರೆದು, ಪ್ರಶ್ನೆಗಳ ಹೃದಯವನ್ನು ಬಿಚ್ಚಿಕೊಂಡು ಬನ್ನಿ ಮೈಲಾರಕ್ಕೆ. ಹುಡುಕಿ; ಎಲ್ಲೆಂದರಲ್ಲಿ ನಿಮಗೆ ನಿಗೂಢಗಳು ಎದುರಾಗುತ್ತವೆ. ಉತ್ತರಗಳು ಆರಾಧನೆಯ ರೂಪದಲ್ಲಿ; ಆಚರಣೆಯ ರೂಪದಲ್ಲಿ; ನಿಧಿಯಂತೆ ತುಂಬಿಕೊಂಡು ತೆರೆದುಕೊಂಡಿವೆ. ಶೋಧಿಸಿ.

ಆದರೆ ನಿಮಗೆ ಜನ ದಾರಿಬಿಟ್ಟರಲ್ಲವೆ? ಹೆಚ್ಚು ಜನ ಸೇರಿದ ಕೂಡಲೆ ಏನೆಲ್ಲ ತಾಪತ್ರಯಗಳು ಶುರುವಾಗುತ್ತದೆ. ಅವರು ತಮ್ಮ ವಲಸೆಗಾರ ಪೂರ್ವಿಕರಂತೆ, ಹತ್ತಾರು ದಿನ ಇದ್ದು ಹೋಗಲು ಬಂದಿರುವುದರಿಂದ, ತಾತ್ಕಾಲಿಕ ವಸತಿಗಳು ನಿರ್ಮಾಣವಾಗಬೇಕು. ನೀರಿನ ಸೌಕರ್ಯ, ಊಟದ ವ್ಯವಸ್ಥೆ ಆಗಬೇಕು. ಪರಿಸರ ಮಲಿನವಾಗಕೂಡದು. ಈ ಎಲ್ಲವೂ ಸುಲಭದಲ್ಲಿ ಸಾಧ್ಯವಾಗಿ ಬಿಡುತ್ತವೆ ಈ

ಸಣ್ಣ ಮೈಲಾರ ಎಂಬ ಊರಿನಲ್ಲಿ: ಸುಗ್ಗಿಯ ನಂತರ ಮೈಲಾರದ ಸುತ್ತಮುತ್ತಲಿನ ಹೊಲಗಳು ಖಾಲಿಯಾಗಿರುತ್ತವೆ. ಅಲ್ಲಿ ಬಂಡಿಗಳಿಗೆ ಗುಡಾರ, ಕೌದಿ, ಚಾದರು, ತಾಡಪಾಲುಗಳನ್ನು ಹೊದಿಸಿ ಮನೆಗಳನ್ನಾಗಿ ಮಾಡಿಕೊಳ್ಳಲಾಗುತ್ತದೆ. ಹೆಂಗಸರು ತುಂಗೆಯಲ್ಲಿ ಸ್ನಾನ ಮಾಡಿ ಶುಚಿರ್ಭೂತರಾಗಿ ಎರೆಮಣ್ಣಿನ ಒಲೆ ಗುಂಡು ಮಾಡಿ ಪಾಂಡವರನ್ನು ರಚಿಸಿ, ಪೂಜೆ ಮಾಡಿ, ಅಡುಗೆಗೆ ಸಿದ್ಧರಾಗುತ್ತಾರೆ. ಹೊಸ ಪ್ರದೇಶಕ್ಕೆ ಬಂದು ತಾತ್ಕಾಲಿಕವಾಗಿ ನೆಲೆ ನಿಂತ ಖುಷಿಯಲ್ಲಿ ಎಲ್ಲರಿಗೂ ಲವಲವಿಕೆಯೆ. ಈ ಜನಗಳನ್ನು ಆಕರ್ಷಿಸುವ ಹಲವು ಹತ್ತು ಬಗೆಯ ವ್ಯಾಪಾರ ಮಳಿಗೆಗಳು, ಆಟ-ವಿನೋದಗಳ ಟೆಂಟುಗಳು ತಳವೂರಿರುತ್ತವೆ. ಇಲ್ಲಿ ಸಿಗಲಾರದ ವಸ್ತುವಿರುವುದಿಲ್ಲ. ಪೂಜೆಗೆ ಬೇಕಾಗುವ ಕುಂಕುಮ, ಭಂಡಾರ, ಚಂದ್ರ ಊದುಬತ್ತಿಗಳ ಗುಡ್ಡೆಗಳು ರೈತರಿಗೆ ಉಪಯೋಗವಾಗುವ ಹಗ್ಗಮಿಣಿ, ಹೆಂಗಸರಿಗೆ ಬೇಕಾಗುವ ಪಾತ್ರೆ ಪಡಗ, ಅಲಂಕಾರಕ ವಸ್ತುಗಳು, ಮಕ್ಕಳ ಮನಸ್ಸನ್ನು ಸೂರೆಗೊಳ್ಳುವ ಆಟಿಕೆಗಳು, ಹದಿಹರೆಯದವರ ಮೋಜಿಗೆ ರೆಡಿಯಾಗಿರುವ ಚಕ್ರ, ಉಯ್ಯಾಲೆ, ಪ್ರಾಣಿ ಪ್ರದರ್ಶನ, ಸ್ಟುಡಿಯೊ, ಸಿನೆಮಾ ಮೊದಲಾದವುಗಳು, ತಿಂಡಿ ತಿನಿಸುಗಳ ಹೋಟೆಲುಗಳು ಒಂದೇ ಎರಡೇ. ಕೊನೆಗೆ ಕ್ಷೌರಿಕರ ಅಂಗಡಿಗಳಿಗೂ ಬರಗಾಲವಿರುವುದಿಲ್ಲ. ಮೈಲಾರಕ್ಕೆ ಬಂದೇ ಹಜಾಮತಿ ಮಾಡಿಸಿಕೊಳ್ಳುವವರೆಷ್ಟು ಮಂದಿ!

ಜಾತ್ರೆಗೂ ಈ ವ್ಯಾಪಾರಸ್ಥರ ಈ ವಹಿವಾಟಿಗೂ ಎಲ್ಲಿಯ ಸಂಬಂಧ ಎಂದು ಕೇಳುವಿರಲ್ಲವೆ? ಎಲ್ಲಿಯ ಗುಡ್ಡದ ನೆಲ್ಲಿ ಎಲ್ಲಿಯ ಸಮುದ್ರದ ಉಪ್ಪು ಎಂಬಂತೆ ತೋರುತ್ತದೆ ಈ ಸಂಬಂಧ. ಆದರೆ ಜಾತ್ರೆಗೂ ವ್ಯಾಪಾರಕ್ಕೂ ನಿಕಟವಾದ ಬಿಡಿಸಲಾಗದ ನಂಟಿದೆ. ವ್ಯಾಪಾರವಿಲ್ಲದೆ ಜಾತ್ರೆಯೇ ಇರಲಾರದು; ಜಾತ್ರೆಯಿಲ್ಲದೆ ವ್ಯಾಪಾರವೇ ಇರಲಾರದ ಒಂದು ಕಾಲವಿತ್ತು. ಇಂದು ಜಾತ್ರೆಗಳಿಲ್ಲದಿದ್ದರೂ ವ್ಯಾಪಾರ ನಿರಂತರವಾಗಿ ಸಾಗುತ್ತಿದೆ. ವಾರದ ಸಂತೆಗಳು ಹಳ್ಳಿಗಾಡುಗಳಲ್ಲಿದ್ದರೆ ಪೇಟೆಯಿಂದಲೇ ದೊಡ್ಡ ಊರುಗಳು ಪಟ್ಟಣಗಳಾಗಿ ಮೆರೆಯುತ್ತಿವೆ. ಅಲ್ಲಿ ದಿನನಿತ್ಯವೂ ವ್ಯಾಪಾರ.

ವ್ಯಾಪಾರವೇ ಅವುಗಳ ಉಸಿರು. ಆದರೆ ಹಿಂದಿನ ಕಾಲದಲ್ಲಿ ಈ ಪರಿಸ್ಥಿತಿ ಇರಲಿಲ್ಲ. ಹಳ್ಳಿ, ದೊಡ್ಡ ಊರುಗಳು ಮಾತ್ರ ಇದ್ದವು. ರಾಜರ ರಾಜಧಾನಿಗಳು ಎಲ್ಲೋ ಒಂದು ಎರಡು. ಅವು ಹುಟ್ಟುವ ಮೊದಲೇ ಜಾತ್ರೆ-ವ್ಯಾಪಾರಗಳು ಹುಟ್ಟಿವೆ. ಆಗ ರಾಜರೂ ಇರಲಿಲ್ಲ, ರಾಜಧಾನಿಗಳೂ ಇರಲಿಲ್ಲ. ಆದರೆ ಕೊಡುಕೊಳ್ಳುವ ವ್ಯವಹಾರ ನಡೆಯಲೇ ಬೇಕಿತ್ತು.

ಎಲ್ಲರೂ ಎಲ್ಲ ವಸ್ತುಗಳನ್ನೂ ಉತ್ಪಾದಿಸಲು ಸಾಧ್ಯವಿರಲಿಲ್ಲ. ಹಾಗಾಗಿ, ಪ್ರತಿವರ್ಷವೂ ತಪ್ಪದಂತೆ ನಡೆಯುವ ಜಾತ್ರೆಗಳಲ್ಲಿ ಅನೇಕ ವಿಧದ ಸಾಮಗ್ರಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಜನ ಸೇರಬೇಕಾಗುತ್ತಿತ್ತು. ಅಲ್ಲಿ ದೇವರ ಆರಾಧನೆ ಎಷ್ಟು ಮುಖ್ಯವೋ ಅಷ್ಟೇ ವ್ಯವಹಾರವೂ ಮುಖ್ಯವಾಗುತ್ತಿತ್ತು; ಅನಿವಾರ್ಯವಾಗುತ್ತಿತ್ತು. ವರ್ಷಕ್ಕೆ ಬೇಕಾಗುವ ಎಲ್ಲ ವಸ್ತುಗಳನ್ನು ಅವರು ಜಾತ್ರೆಯ ಸಂದರ್ಭದಲ್ಲಿ ನೆರೆಯುತ್ತಿದ್ದ ಸಂತೆಯಲ್ಲಿ ಕೊಳ್ಳುತ್ತಿದ್ದರು. ಕೊಳ್ಳುತ್ತಿದ್ದರು ಎನ್ನುವುದಕ್ಕಿಂತ ವಿನಿಮಯ ಮಾಡಿಕೊಳ್ಳುತ್ತಿದ್ದರೆನ್ನುವುದು ಹೆಚ್ಚು ಸೂಕ್ತ. ಏಕೆಂದರೆ ಆಗ ಈಗಿನಂತೆ 'ಹಣ' ಇರಲಿಲ್ಲ. ನಮಗೆ ಬೇಕಾದುದನ್ನು ನಮ್ಮಲ್ಲಿರುವ ಯಾವುದೋ ವಸ್ತುವನ್ನು ಕೊಟ್ಟು ಪಡೆಯಬೇಕಿತ್ತು. ಈಗಲೂ ಹಳ್ಳಿಗಳಲ್ಲಿ ಈ ಪದ್ಧತಿ ಇದೆಯಲ್ಲವೆ? ಜೋಳ, ಹತ್ತಿಕೊಟ್ಟು, ಕಾರ, ಚುರಮರಿ, ಚಾಪುಡಿ, ಸಕ್ಕರೆ ಮೊದಲಾದ ವಸ್ತುಗಳನ್ನು ಪಡೆಯುವ ಸ್ಥಿತಿ ಇನ್ನೂ ಇದೆ.

ಇದಿರಲಿ, ಮೈಲಾರನ ಜಾತ್ರೆಗೆ ಬಂದ ನಾವು ಈ ವ್ಯಾಪಾರಸ್ಥರ ಬೆನ್ನ ಹತ್ತಿ ಹೊರಟರೆ ಇದೇ ಗತಿ. ದೇಗುಲದ ಕಡೆ ಹೊರಡೋಣವೆ. ಇದೇನು ಸಾಲುಗಟ್ಟಿಕೊಂಡು ಬೀದಿಯ ಆಚೆಈಚೆ ಉದ್ದಕ್ಕೂ ಅನ್ನದ ರಾಶಿಗಳು, ರೊಟ್ಟಿಯ ಗುಡ್ಡಗಳು. ರಾಜಾರೋಷವಾಗಿ ಬೆರೆಯುತ್ತಿರುವ ಮಣ್ಣುರೋಡಿನ ಧೂಳು. ಕಸದ ಈ ಅನ್ನ, ರೊಟ್ಟಿ, ಪಲ್ಲೆಗಳನ್ನು ಸಂಗ್ರಹಿಸುವ ರುಚಿ ನೋಡುತ್ತಿರುವ ಹೆಂಗಸರು,

ಮಕ್ಕಳು, ಬೇಲಿಗಂಟಿಕೊಂಡ ಅನ್ನದ ರಾಶಿಗಳು, ಅವನ್ನು ಒಣಗಿಸುತ್ತಿರುವ ಗಂಡಸರು! ಅಬ್ಬಾ ಎಂಥ ಭೀಕರ ದೃಶ್ಯ. ಆರೋಗ್ಯದ ಪ್ರಾಥಮಿಕ ಪಾಠಗಳನ್ನು ತಿಳಿದಿರುವ ಯಾರಿಗಾದರೂ ಈ ದೃಶ್ಯ ಬೆಚ್ಚಿ ಬೀಳಿಸುತ್ತದೆ. ಕಾಲರಾ, ಮೊದಲಾದ ಸಾಂಕ್ರಾಮಿಕ ರೋಗಗಳು ಸುಲಭವಾಗಿ ಹಬ್ಬಲು ಈ ಪರಿಸ್ಥಿತಿ, ಅನುಕೂಲಕರವಾಗಿದೆ ಎನಿಸುವುದಿಲ್ಲವೆ? ಕಾಲರಾ ಚುಚ್ಚು ಮದ್ದನ್ನು ಹಾಕಿಯೆ ಜಾತ್ರೆಗೆ ಬಿಡುವ ಸರಕಾರ ಈಗಿದೆ. ಹಾಗಾಗಿ ಬಹುತೇಕ ಕಾಲರಾ ಬರುವುದಿಲ್ಲ. ಆದರೆ ಈ ಅನುಕೂಲತೆ ಇಲ್ಲದ ಹಿಂದಿನ ಕಾಲದಲ್ಲಿ ಸ್ಥಿತಿ ಹೇಗಿರಬೇಡ? ಯಾರು ಈ ರೀತಿ ಭಿಕ್ಷೆ ಎತ್ತುತ್ತಿರುವ ಜನ? ಇದೂ ಸಹ ಜಾತ್ರೆಯ ವಿಧಿನಿಯಮಗಳಲ್ಲಿ ಕಡ್ಡಾಯ ಕ್ರಮವೆ?

ಹೌದು, ಜಾತ್ರೆಗೆ ಬರುವ ಭಕ್ತರು ಕಟ್ಟಿಕೊಂಡು ಬರುವ ಅನ್ನದಲ್ಲಿ ಒಂದು ಪಾಲನ್ನು ಇವರಿಗೂ ಹಾಕುತ್ತಾರೆ. ಧಾರ್ಮಿಕ ನಿಯಮವೆಂಬಂತೆ ಈ ಜನ ಅದನ್ನು ಒಣಗಿಸಿ ಸಂಗ್ರಹಿಸಿಕೊಂಡಾದರೂ ತಿನ್ನುತ್ತಾರೆ.

ಮನುಷ್ಯನಿಗೆ ಇಂಥ ದುಸ್ಥಿತಿ ಎಂದೂ ಬರಬಾರದು ಎನಿಸುವುದಿಲ್ಲವೆ? ಮನುಷ್ಯ ಮನುಷ್ಯರಲ್ಲಿ ಅಸಮಾನತೆ, ಮೇಲು-ಕೀಳು, ಮೊದಲಾದ ಯಾವ ಭೇದ ಭಾವಗಳು ಇರಬಾರದು ಎಂದು ನಂಬಿದ್ದೇವೆ. ಹೀಗಿರುವಾಗ, ಇಂಥ ದೃಶ್ಯಗಳನ್ನು ನೋಡಿದರೆ ಮನಸ್ಸಿಗೆ ಬೇಸರವಾಗದೆ ಇದ್ದೀತೆ? ಈ ರೀತಿ ಬೇಡುವ ಜನರ ಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ ದುಡಿಮೆ ಇರಲಿಕ್ಕಿಲ್ಲ, ಹೊಟ್ಟೆ ಬಟ್ಟೆಗೆ ಇಲ್ಲದ ಸ್ಥಿತಿ ಇರಬೇಕು. ನಮ್ಮಲ್ಲಿ ಭೂಮಿ, ನೀರು, ಕಾಡು, ಖನಿಜಗಳ ಸಂಪತ್ತಿಗೆ ಕೊರತೆಯಿಲ್ಲ. ಆದರೂ ಈ ಸ್ಥಿತಿ ಏಕೆ ಇದೆ?

ಹಾಗೆ ಮುಂದೆ ಬಂದರೆ ಮಣ್ಣಿನಲ್ಲಿ ಮುಚ್ಚಿಹೋದವನೊಬ್ಬನ ಕೈ ಮಾತ್ರ ಹೊರಗಿರುವುದನ್ನು ನೋಡುತ್ತೇವೆ. ಅವನ ಹೆಂಡತಿ ಹಾದಿಹೋಕರು ಎಸೆದ



ಭಕ್ತನೊಬ್ಬ ಕಾಲಿಗೆ ಸರಳು ಚುಚ್ಚಿಕೊಂಡಿರುವುದು

ಪುಡಿಗಾಸನ್ನು ಸಂಗ್ರಹಿಸುತ್ತಿದ್ದಾಳೆ. ತನ್ನನ್ನೇ ಸಮಾಧಿ ಮಾಡಿಕೊಂಡ ಈ ವ್ಯಕ್ತಿ ಹೇಗೆ ಬದುಕಿದ್ದಾನೆ? ಉಸಿರಾಡಲು ಎಲ್ಲಿ ಜಾಗೆ ಬಿಟ್ಟುಕೊಂಡಿದ್ದಾನೆ? ಎಂದು ಕುತೂಹಲಗೊಳ್ಳುವವರು ಕೆಲವು ಜನ. ಸಾಧ್ಯವಿದ್ದರೆ ಕಾಸು ಎಸೆದೋ, ಅದಾಗದಿದ್ದಲ್ಲಿ ಎಲ್ಲಿಯೋ ಧ್ಯಾನಸ್ಥರಾಗಿ ಗಡಿಬಿಡಿಯಲ್ಲಿ ಹೊರಟ ಜನಗಳೇ ಜಾಸ್ತಿ. ಇವನ ಪಕ್ಕಕ್ಕೆ ಇನ್ನೊಬ್ಬ ಮುಖವನ್ನಷ್ಟೇ ಮಣ್ಣಲ್ಲಿ ಹುಗಿದುಕೊಂಡು, ದೇಹವನ್ನು ಅಲ್ಲಾಡಿಸುತ್ತಿದ್ದಾನೆ. ಮಗದೊಬ್ಬ ದೇಹವನ್ನೆಲ್ಲಾ ಹುಗಿದುಕೊಂಡು ಮುಖವನ್ನು

ಮಾತ್ರ ಹೊರಚಾಚಿದ್ದಾನೆ. ಇವರ ಈ ಸಾಹಸದ ಹಿಂದೆ ಎಂಥ ಆತ್ಮಸ್ಥೈರ್ಯ ಕೆಲಸ ಮಾಡುತ್ತಿದೆಯಲ್ಲವೆ? ಇದೂ ಸಹ ಮೈಲಾರನ ಜಾತ್ರೆಯಲ್ಲಿ ಬೇಡಿಕೊಂಡು ಸೇವೆ ಸಲ್ಲಿಸುವ ವಿಧಾನವೆ?



ಸರಪಳಿ ಪವಾಡಕ್ಕೆ ಸಿದ್ಧತೆ

ಹಾವುಗಳನ್ನು ಸುತ್ತಿಕೊಂಡು, ತಲೆ ಹಿಂಭಾಗದಲ್ಲಿ ತುಂಬಿದ ಕೊಡವನ್ನು ಬೀಳದಂತೆ ತಡೆ ಹಿಡಿದಿರುವ ಇನ್ನೊಬ್ಬ ಭಿಕ್ಷುಕ ರಸ್ತೆಯ ಮಧ್ಯಭಾಗವನ್ನು ಆಕ್ರಮಿಸಿದ್ದಾನೆ. ಚಬುಕದಿಂದ ರೆಟ್ಟೆಗೆ ಹೊಡೆದುಕೊಂಡು, ಬಸಿಯುವ ರಕ್ತವನ್ನು, ಬಿಸಿಲಲ್ಲಿ ಅಂಗಾತ ಮಲಗಿದ ಮಗನ ಬರಿ ಹೊಟ್ಟೆಯ ಮೇಲೆ ಹಿಂಡುತ್ತಿದ್ದಾನೆ. ಇದೋ ಈ ದುರುಗ ಮುರಿಗಿ ಇವನ ಹೆಂಡತಿ ಉರುಮೆ ಬಾರಿಸುತ್ತ ಜನರ ಕಿವಿಗಳ ಮೂಲಕ ಮನಸ್ಸನ್ನು ಜೇಬನ್ನು ಎಳೆಯುತ್ತಿದ್ದಾಳೆ. ಇದೂ ಭಯಾನಕ ದೃಶ್ಯವೇ. ಹೊಟ್ಟೆಗೆ ಅನ್ನ ಕಾಣಿಸಲು ಹೊರಟ ಈ ಕುಟುಂಬದ ಯಜಮಾನ ರಕ್ತವನ್ನೇ ಹಿಂಡಿಕೊಳ್ಳುತ್ತಿದ್ದಾನೆ.

ಈ ದೃಶ್ಯ ಮೈಲಾರನ ದೇಗುಲದ ಮಹಾದ್ವಾರದ ಅಂಗಳದಲ್ಲಿ ನಡೆಯುತ್ತಿದೆ. ಈ ಜಂಜಾಟದಿಂದ ಬಿಡಿಸಿಕೊಂಡು ಜನರ ನೂಕುನುಗ್ಗಲನ್ನು ಭೇದಿಸಿಕೊಂಡು ಮಹಾದ್ವಾರವನ್ನು ದಾಟಿದರೆ ಕಾಣುವ ದೃಶ್ಯ ಮತ್ತೊಂದು ಬಗೆಯದು.

ಆಲದ ಮರದ ಕೆಳಗೆ, ಹದವಾದ ಹಾಸುಗಲ್ಲು ಅಂಗಳದ ತುಂಬ ಕಿಕ್ಕಿರಿದ ಜನ ಈ ಕಡೆ ಗೊರವ ಡೋಣಿಗಳನ್ನು ತುಂಬಿಸುವ ಭಕ್ತರೂ ಅತ್ತ ಕುದುರೆಕಾರರಾಗಿ ಬೇಡಿಕೊಂಡ ಗಂಡಸರು, ಗೊರುವರು ಕುಣಿಕುಣಿದು ಚಬುಕದಿಂದ ಹೊಡೆದುಕೊಳ್ಳುತ್ತಿರುವ ದೃಶ್ಯ, ಇತ್ತ ಮಾಳಮ್ಮನ ಗುಡಿ ಎದುರು ರೋಷಾವೇಶದ ಗೊರವನೊಬ್ಬ ಲಮಾಣಿ ಹೆಂಗಸೊಬ್ಬಳ ತಲೆ ಮೇಲೆ ಕಾಲಿಟ್ಟು ಭೂತ ಬಿಡಿಸುತ್ತಿದ್ದಾನೆ. ಗೊರವಪ್ಪಗಳು ತಮ್ಮ ಸಾಂಪ್ರದಾಯಿಕ ವೇಷದಲ್ಲಿ ಎದ್ದು ಕಾಣುತ್ತಿದ್ದಾರೆ. ಅವರು ಕಂಡಕಂಡವರಿಗೆ ಭಂಡಾರವನ್ನು ಬಳಿಯುತ್ತ ಕಾಣಿಕೆಗಾಗಿ ಪೀಡಿಸುತ್ತಿದ್ದಾರೆ. ಕೆಲವರು ದೇಗುಲದೆದುರು ಕಟ್ಟೆಯ ಮೇಲೆ ಕೂತು ಭಕ್ತರ ಕಾಯಿ ಒಡೆದು ಪ್ರಸಾದ ರೂಪದಲ್ಲಿ ಭಂಡಾರ ಕೊಡುತ್ತಿದ್ದಾರೆ. ಕಾಯಕೋಲು ದೀವಟಿಗೆ ಸೇವೆಯವರು ಹಗಲಿನಲ್ಲೇ ಎಣ್ಣೆ ಹಾಕಿ ದೀಪ ಉರಿಸುತ್ತಿದ್ದಾರೆ. ಒದ್ದೆ ವಸ್ತ್ರಗಳಲ್ಲಿ ಗುಡಿಯನ್ನು ಪ್ರದಕ್ಷಿಸಿ ಬಂದ ಬೇಡಿಕೊಂಡವರು ಕಳಚಿದ ವಸ್ತ್ರಗಳ ರಾಶಿಯನ್ನು ತುಳಿಯುತ್ತಲೇ ಗುಡಿ ಅಂಗಳಕ್ಕೆ ಪ್ರವೇಶಿಸಬೇಕು. ಅಲ್ಲಿ ಗೊರವಪ್ಪಗಳ ತಟ್ಟೆಗೆ ಅಥವಾ ಕಂಚಿನ ಡೋಣಿಗಳಿಗೆ, ಅನ್ನ, ಬಾಳೆಹಣ್ಣು, ರೊಟ್ಟಿ, ಪಲ್ಲೆಗಳನ್ನು ನೀಡುತ್ತಿರುವವರ ಪೈಪೋಟಿ. ನೀಡಿದ್ದನ್ನು ಬುಟ್ಟಿಗಳಿಗೆ ಎತ್ತಿಟ್ಟುಕೊಳ್ಳುವ ಹೆಂಗಸರು, ಮಕ್ಕಳು, ಗೊರವಪ್ಪಗಳು. ಗುಡಿಯೊಳಗೆ ಬಂದರೆ ದೇವರು ಕಾಣಲಾರದಷ್ಟು ಜನದಟ್ಟಣೆ. ಎಷ್ಟೇ ಪ್ರಯತ್ನಪಟ್ಟರೂ ಒಳನುಗ್ಗಲು ಆಗದು. ಅಲ್ಲಿಯೂ ಸಾಂಪ್ರದಾಯಕವಾಗಿ ಸನಾತನ ಕಾಲದಿಂದ, ನಡೆದುಬಂದಿರುವ ಆಚರಣೆಗಳು ಚಾಚೂ ತಪ್ಪದಂತೆ ಜರುಗುತ್ತಲಿವೆ. ಎಂಟು ಹತ್ತು ದಿನಗಳವರೆಗೆ ಎಡೆಬಿಡದೆ ನಡೆಯುವ ಜಾತ್ರೆಯ ಕೇಂದ್ರ ಬಿಂದು

ಮೈಲಾರಲಿಂಗನಲ್ಲವೆ? ಪ್ರತಿ ದಿನವೂ ವೈವಿಧ್ಯಮಯವಾದ ವಿಧ್ಯುಕ್ತ ಕ್ರಿಯೆಗಳು ನಡೆಯುತ್ತವೆ. ಅವುಗಳ ವಿವರಗಳಲ್ಲಿಯೆ ವಲಸೆಗಾರ ಕುರುಬರ ಜೀವನ ವಿಧಾನದ ಅಮೂಲ್ಯ ವಿಷಯಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

ಜಾತ್ರೆಯ ಬಾಹ್ಯ ಆಕರ್ಷಣೆ, ಮೋಜು, ಆಡಂಬರಗಳಿಂದ ಬಿಡಿಸಿಕೊಂಡು, ಅಂತರಂಗದ ನಿಗೂಢ ಭೂತಕಾಲಕ್ಕೆ ಸೇರಿ ಹೋಗಬೇಕಾಗುತ್ತದೆ. ಆ ಭೂತಕಾಲ ಇಂದಿಗೂ ಜೀವಂತವಿರುವ ವರ್ತಮಾನ ಕಾಲವೂ ಹೌದು. ಅಲ್ಲಿ ಪರಿವರ್ತನೆಗಳಾಗುವುದು ಸುಲಭವಲ್ಲ.

ಬಲಿಯಿಲ್ಲ, ತೇರಿಲ್ಲ

ಮೈಲಾರನ ಜಾತ್ರೆಯಲ್ಲಿ ಪ್ರಾಣಿಬಲಿ ಮತ್ತು ತೇರು ಎಳೆಯುವ ಪ್ರಸಂಗಗಳು ಬರುವುದಿಲ್ಲ. ಹೆಣ್ಣು ದೇವರುಗಳ ಜಾತ್ರೆಯಲ್ಲಿ ಕುರಿ, ಕೋಳಿ, ಕೋಣ, ಹಂದಿಗಳನ್ನು ಆಯಾ ಪ್ರದೇಶದ ಪದ್ಧತಿಗೆ ಅನುಗುಣವಾಗಿ ಬಲಿ ಕೊಡುತ್ತಾರೆ. ಇದರಿಂದ ದೇವಿ ತೃಪ್ತಳಾಗಿ ತಮಗೆ ಒಲಿಯುವಳು. ಬೇಡಿದ್ದನ್ನು ನೀಡುವಳು ಎಂದು ಜನರ ನಂಬಿಕೆ. ಈ ನಂಬಿಕೆ ಸಾವಿರಾರು ವರ್ಷಗಳಿಂದ, ತಲೆಮಾರಿನಿಂದ ತಲೆಮಾರಿಗೆ ಉಳಿದು ಬಂದಿದೆ. ಕಾಲ ಸಾಕಷ್ಟು ಬದಲಾಗಿದ್ದರೂ ಈ ನಂಬಿಕೆ ಮತ್ತು ಆಚರಣೆಗಳು ಸುಲಭದಲ್ಲಿ ಬದಲಾಗುವುದು ಕಷ್ಟ. ಮಾಂಸವನ್ನು ಆಹಾರವನ್ನಾಗಿ ಮಾಡಿಕೊಂಡಿರುವ ಜನತೆ ದೇವಿಗೆ ಅರ್ಪಿಸಿದ ಪ್ರಾಣಿಯ ಮಾಂಸವನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸುತ್ತಾರೆ.

ಆದರೆ ಗಂಡುದೇವರುಗಳ ಜಾತ್ರೆಗಳಲ್ಲಿ ಬಲಿ ಇಲ್ಲದಿರುವುದು ಸರ್ವೇಸಾಮಾನ್ಯ. ಯಾವ ಜಾತಿಯ ಜನಗಳೇ ಆಗಿದ್ದರೂ ಗಂಡು ದೇವರುಗಳಿಗೆ ಬಲಿ ಕೊಡುವುದಿಲ್ಲ. ಇದಕ್ಕೆ ಅಪರೂಪವಾಗಿ ಅಪವಾದಗಳೂ ಇರಬಹುದು. ಮೈಲಾರದಲ್ಲಿ ನಡೆಯುವ ಜಾತ್ರೆಯಲ್ಲಿ ಬಲಿ ಅರ್ಪಿಸುವ ಪದ್ಧತಿಯಿಲ್ಲ.

ಮಾಂಸಾಹಾರಿಗಳಾದ ಜನರ ದೇವರಾಗಿದ್ದರೂ ಬಲಿ ಪದ್ಧತಿ ಇಲ್ಲದಿರುವುದು ಆಶ್ಚರ್ಯದ ಸಂಗತಿಯಲ್ಲವೆ? ಇದಕ್ಕೆ ಕಾರಣವೇನಿರಬಹುದು? ಒಂದು ಪ್ರಬಲವಾದ ಊಹೆಯನ್ನು ಇದಕ್ಕೆ ಸಂಬಂಧಪಟ್ಟು ಮಾಡಬಹುದಾಗಿದೆ.

ಕೃಷಿ ಪದ್ಧತಿಯನ್ನು ಅನುಸರಿಸಿದ ಸಮಾಜಗಳಲ್ಲಿ ಅಮ್ಮನ ಆರಾಧನೆ ಮತ್ತು ಹಬ್ಬಗಳಲ್ಲಿ ಪ್ರಾಣಿ ಬಲಿ ಇರುವುದು ಜಗತ್ತಿನಾದ್ಯಂತ ಕಂಡುಬರುತ್ತದೆ. ಕೃಷಿಗೆ ಪ್ರಧಾನವಲ್ಲದ ಪ್ರಾಣಿಗಳನ್ನು, ಕೃಷಿಯ ಸಮೃದ್ಧಿಗಾಗಿ ಬಲಿ ಕೊಡುವ ಪದ್ಧತಿ ಎಲ್ಲೆಡೆಯಿದೆ. ಮೊಟ್ಟ ಮೊದಲು ಒಕ್ಕಲುತನವನ್ನು ಹೆಂಗಸರೇ ಕಂಡುಹಿಡಿದರು ಎಂದು ಹೇಳುತ್ತಾರೆ. ಹಾಗಾಗಿ ಆ ಕಾಲದಲ್ಲಿ ಅವರೇ ಪ್ರಬಲರಾಗಿದ್ದರು. ಮತ್ತು ಈ ಪರಿಸ್ಥಿತಿಗೆ ಅನುಸಾರವಾಗಿ ಅಮ್ಮನ ಆರಾಧನೆಯೂ ಪ್ರಮುಖವಾಯಿತು. ಇಂದಿಗೂ ನಮ್ಮ ಸಮಾಜದಲ್ಲಿ ಅದರ ಪಳೆಯುಳಿಕೆಯನ್ನು ಕಾಣುತ್ತೇವೆ.

ಪಶುಪಾಲಕರಲ್ಲಿ ಪಿತೃಪ್ರಧಾನ ಸಮಾಜ ವ್ಯವಸ್ಥೆ ಇತ್ತು. ಅವರು ಸಾಕುತ್ತಿದ್ದ ಮತ್ತು ಅವರ ಉಪಜೀವನಕ್ಕೆ ಆಧಾರವಾಗಿದ್ದ ಪಶುಗಳನ್ನು ಬಲಿ ಕೊಡುವುದು ತಪ್ಪು ಎಂದು ತಿಳಿದಿದ್ದಿರಬೇಕು. ಮತ್ತು ಇದರಿಂದ ತಮ್ಮ ದೇವರು ಸಿಟ್ಟಾಗುವನೆಂದು ನಂಬಿರಬೇಕು. ಆಗ ಗಂಡು ದೇವರುಗಳೆ ಪ್ರಮುಖವಾಗಿದ್ದವು. ಅಂತೆಯೇ ಪುರುಷ ಪ್ರಧಾನ, ಪಶುಪಾಲಕ ಸಮಾಜದಲ್ಲಿ ಹುಟ್ಟಿದ್ದ ಮೈಲಾರ ಜಾತ್ರೆಯಲ್ಲಿ ಪ್ರಾಣಿಗಳ ಬಲಿ ಇರಲಾರದು. ಬದಲಿಗೆ ಜಾತ್ರೆಗೆ ಬಂದ ಹೋರಿ, ಎತ್ತುಗಳನ್ನು ಸಿಂಗರಿಸಿ. ಮೈಲಾರ ದೇಗುಲದ ಸುತ್ತ ಪ್ರದಕ್ಷಿಣೆ ಬರುವುದು ಕಂಡು ಬರುತ್ತದೆ.

ಗಂಡು, ಹೆಣ್ಣು ದೇವರುಗಳ ಜಾತ್ರೆಗಳಲ್ಲಿ ತೇರು ಎಳೆಯುವುದು ಎಲ್ಲ ಕಡೆ ಕಾಣುವ ವಿಧಿ. ತೇರು ಇಲ್ಲದೆ ಜಾತ್ರೆಯೇ ಇರಲಾರದು ಎಂಬಷ್ಟು ಮಟ್ಟಿಗೆ ಅದಕ್ಕೆ ಮಹತ್ವವಿದೆ. ತೇರು ಎಳೆಯುತ್ತಲೇ ಜಾತ್ರೆ ಮುಗಿದಂತೆ. ಆದರೆ ಸುಪ್ರಸಿದ್ಧ

ಮೈಲಾರನ ಜಾತ್ರೆಯಲ್ಲಿ ತೇರು ಎಳೆಯುವುದಿಲ್ಲ. ಅಂದರೆ ತೇರಿಗೂ, ಮೈಲಾರನಿಗೂ ಆಗಿಬರುವುದಿಲ್ಲ. ಇದಕ್ಕೆ ಏನು ಕಾರಣವಿದ್ದೀತು?

ಈ ವಿಷಯವನ್ನು ತಿಳಿಯಬೇಕಾದರೆ ತೇರಿನ ಬೆನ್ನು ಹತ್ತಿ ನಾವು ಬಹುದೂರ ಸಾಗಿ ಹೋಗಬೇಕಾಗುತ್ತದೆ. ಅದು ಬಹು ದೀರ್ಘವಾದ ದಾರಿ. ಅದನ್ನಿಲ್ಲಿ ಪ್ರಸ್ತಾಪಿಸುವುದು ಕಷ್ಟ ಸಾಧ್ಯ. ಕುರುಬರು ವಿರೋಧಿಸುತ್ತಿದ್ದ ಆಗಿನ ಕಾಲದ ಬೇರೆ ದ್ರಾವಿಡ ಜನಾಂಗಗಳಲ್ಲಿ ತೇರು ಎಳೆಯುವ ಪದ್ಧತಿ ಇತ್ತು ಎಂಬುದನ್ನು ತಿಳಿದರೆ ಸಾಕು.

ಗೊರವ-ಗೊರವಿಯರು

ಮೈಲಾರನ ಜಾತ್ರೆಯಲ್ಲಿ ಗೊರವಪ್ಪ-ಗೊರವಮ್ಮರಿಗೆ ಎಲ್ಲಿಲ್ಲದ ಆದರಾತಿಥ್ಯ. ಅವರ ಆಕರ್ಷಕ ವೇಷಭೂಷಣ, ದೋಣಿ ಸೇವೆಯ ವಿಶಿಷ್ಟ ಕ್ರಮಗಳು ಕುತೂಹಲಕಾರಿಯಾಗಿವೆಯಲ್ಲವೆ? ಕೋರಿ ಅಂಗಿ, ತ್ರಿಶೂಲ, ಡಮರು, ಡೋಣಿ, ಭಂಡಾರ ಚೀಲ, ಕವಡೆಸರಗಳಿಂದ ಅಲಂಕೃತರಾಗಿದ್ದಾರೆ. ಕೆಲವು ಕಡೆ ತಲೆಗೆ ಕರಡಿ ಕೂದಲ ಟೊಪ್ಪಿಗೆಯನ್ನು ಧರಿಸುತ್ತಾರೆ. ಕೊಳಲೂದುತ್ತ, ಡಮರುಗವನ್ನು ಬಾರಿಸುತ್ತ ಗೊರವಟಿಗೆ ಆಡುವುದು ರೋಮಾಂಚಕಾರಿ ಘಟನೆ. ಇದನ್ನು ದಕ್ಷಿಣ ಕರ್ನಾಟಕದಲ್ಲಿ ಮಣೇವು ಹಾಕುವುದು ಎನ್ನುತ್ತಾರೆ. ಕಂಬಳಿಯನ್ನು ಗದ್ದುಗೆ ಮಾಡಿ ಪೂಜಾರ್ಹ ವಸ್ತುಗಳನ್ನೆಲ್ಲ ಅದರ ಮೇಲಿಟ್ಟು ದೋಣಿ ತುಂಬಿಸಿ ಅದರ ಸುತ್ತಲೂ ಬಾರಿಸುತ್ತ ಕುಣಿಯುವ ಗೊರವಪ್ಪಗಳು ಒಂದು ಹಂತದಲ್ಲಿ ಪ್ರಾಣಿಗಳಂತೆ ದೋಣಿಯ ಆಹಾರವನ್ನು ಸೇವಿಸುತ್ತಾರೆ. ಕೈಗೆ ಸಳಿಯನ್ನು ಚುಚ್ಚಿಕೊಂಡು ದೀಪ ಹೊತ್ತಿಸಿ ಬೆಳಗುತ್ತಾರೆ. ಗಲ್ಲಕ್ಕೆ, ನಾಲಿಗೆಗೆ ಸಳಿ ಚುಚ್ಚಿಕೊಂಡು ಕುಣಿಯುತ್ತಾರೆ. ಮೈಲಾರನ ಒಕ್ಕಲಾಗಿರುವ ಭಕ್ತರು ಗೊರವಪ್ಪಗಳ ಈ ಸೇವೆಯನ್ನು ಮದುವೆ, ಹಬ್ಬ, ಉತ್ಸವಗಳಲ್ಲಿ

ನೆರವೇರಿಸುತ್ತಾರೆ. ಅಂದಿನ ಕಾಲದ ಜೀವನಾನುಭವವೇ ಪಳೆಯುಳಿಕೆಯಂತೆ ಇಂದಿಗೂ. ಉಳಿದು ಬಂದಿರುವಂತೆ ಎನಿಸುತ್ತದೆ.

ವಿವಿಧ ಸೇವೆಗಳನ್ನು ಸಲ್ಲಿಸುವ ಗೊರವರಲ್ಲಿ ಹಲವಾರು ಪ್ರಭೇದಗಳಿವೆ. ಕರಡಿ ಗೊರವ, ಪಾರಿಗೊರವ, ಮದ್ದಲೆ ಗೊರವ, ಕುದುರೆಕಾರ ಗೊರವ, ನಾಯಿಗೊರವ, ಕಿನ್ನರಿ ಗೊರವ, ಕಾರಣಿಕ ಗೊರವ ಇತ್ಯಾದಿ. ಹೀಗೆಯೇ ಗೊರವಿಯರಲ್ಲಿ ಎಲೆ ಚಂಚಿ ಗೊರವಿ, ಶಿಬಾರದಾಳಿ ಗೊರವಿ, ಎಣ್ಣೆ ಗೊರವಿ ಮೊದಲಾಗಿ ವಿಭಾಗಗಳಿವೆ. ಇವರೆಲ್ಲ ಹೆಸರಿಗೆ ತಕ್ಕಂತೆ ತಮ್ಮ ವಾದ್ಯಗಳನ್ನು ಬಾರಿಸುತ್ತ ಅಥವಾ ವಸ್ತುಗಳನ್ನು ಬಳಸಿ ದೇವರ ಸೇವೆ ಮಾಡುವ ಪದ್ಧತಿಗಳನ್ನು ಅನುಸರಿಸುತ್ತಾರೆ.

ಮಹಾರಾಷ್ಟ್ರದಲ್ಲಿ ಮೈಲಾರ ಪಂಥ ವ್ಯಾಪಕವಾಗಿ ಹರಡಿದೆ. ಕನ್ನಡ ಕುರುಬರು ಎಲ್ಲಿಂದಲೋ ಮಹಾರಾಷ್ಟ್ರದ ಮೂಲಕ ಕನ್ನಡ ನಾಡಿಗೆ ವಲಸೆ ಬಂದು ನೆಲಸಿದರು. ಮಹಾರಾಷ್ಟ್ರದಲ್ಲಿಯೇ ನೆಲೆ ನಿಂತವರು ಮರಾಠಿ ಭಾಷೆಯನ್ನು ಕಲಿತು 'ಧನಗರ'ರೆಂದು ಪ್ರಖ್ಯಾತರಾದರು. ಅಲ್ಲಿ ಮೈಲಾರನಿಗೆ ಖಂಡೋಬ ಎಂದು ಹೆಸರಾಯಿತು. ಗೊರವಪ್ಪರನ್ನು ವಾಘ್ಯೂ, ಗೊರವಿಯರನ್ನು ಮುರುಳಿ ಎಂದು ಕರೆದರು.

ಭಕ್ತರು ಮತ್ತು ದೇವರ ನಡುವೆ ಸಂಪರ್ಕದ ಸೇತುವೆಯಾಗಿ, ಭಕ್ತರ ದೃಷ್ಟಿಯಲ್ಲಿ ಸಾಕ್ಷಾತ್ ದೇವರೇ ಆಗಿರುವ ಗ್ವಾರಪ್ಪ, ಗ್ವಾರಮ್ಮರು ಮೈಲಾರ ಪಂಥದ ಪ್ರಾಚೀನ ಪದ್ಧತಿಗಳನ್ನು ಅಚ್ಚುಕಟ್ಟಾಗಿ ಉಳಿಸಿಕೊಂಡು ಬಂದರು. ಜನಪದರಿಗೆ ಅವರು 'ಗುರು'ಗಳಂತೆ ಇರುವವರು. ಹಾಗಾಗಿ ಮೈಲಾರ ಜಾತ್ರೆಯಲ್ಲಿ ಇವರಿಗೆ ಎಲ್ಲಿಲ್ಲದ ಗೌರವ, ಆದರ, ಸತ್ಕಾರ. ತಾವು ತಂದ ಊಟವನ್ನು ಗೊರವರ ದೋಣಿಗೆ ಹಾಕದೆ ಯಾವ ಭಕ್ತನೂ ಊಟ ಮಾಡುವುದಿಲ್ಲ. ಮೈಲಾರನ ಒಕ್ಕಲು



ಗುಂಡೆತ್ತಿದರೆ ಇಷ್ಟಾರ್ಥ ಸಿದ್ಧಿ


ಮನೆತನಗಳ ಎಲ್ಲ ವಿಧದ ಧಾರ್ಮಿಕ ಆಚರಣೆಗಳಿಗೆ ಗೊರವಪ್ಪ ಇರಲೇಬೇಕು. ಜನಪದ ಜೀವನದಲ್ಲಿ ವರ್ಷದುದ್ದಕ್ಕೂ ಅವನ ಪಾತ್ರ ಅಡಕವಾಗಿ ಹೋಗಿದೆ.

ಮೈಲಾರನ ಜಾತ್ರೆಯ ದೇವರಿಗೆ ಸಂಬಂಧಪಟ್ಟ ಎಲ್ಲ ಆಚರಣೆಗಳಲ್ಲಿಯೂ ಗೊರವಪ್ಪಗಳ ಮಹತ್ವ ಎದ್ದು ಕಾಣುತ್ತದೆ. ವಿಭಿನ್ನ ರೀತಿಯ ಕೆಲಸಗಳನ್ನು ಅಂದರೆ ದೇವರ ಸೇವೆಗಳನ್ನು ನಿರ್ವಹಿಸಲು ಬೇರೆ ಬೇರೆ ವಿಧದ ಗೊರವಪ್ಪಗಳು ಹುಟ್ಟಿಕೊಂಡಂತೆ ಕಾಣುತ್ತದೆ. ಹಾಗಾಗಿ ಅವರಲ್ಲಿ ಅನೇಕ ಪ್ರಕಾರಗಳು ಹುಟ್ಟಿಕೊಂಡವು.

ಗೊರವಪ್ಪ, ಗೊರವಮ್ಮಗಳು ಯಾವ ಜಾತಿಯವರೇ ಆಗಿರಲಿ ದೀಕ್ಷೆ ಪಡೆದ ನಂತರ ಅವರ ಜಾತಿಗಳು ನಾಶವಾಗಿ ಹೋಗುತ್ತವೆ. ಭಕ್ತರು ಅವರ ಜಾತಿ ಕುಲಗಳನ್ನು ಕೇಳುವುದಿಲ್ಲ. ಅವರು ಆಗ ದೇವರ ಸಮಾನರು. ಈ ಅಂಶ ಜಾತಿಪದ್ಧತಿಯ ಸಾಮಾಜಿಕ ಅಸಮಾನತೆ ಇರುವ ನಮ್ಮ ನಾಡಿನಲ್ಲಿ ಬಹಳ

ಮುಖ್ಯವಾದುದಾಗಿದೆ. ಏಕೆಂದರೆ ಮಾನವ, ಮಾನವರ ನಡುವೆ ಮೇಲು ಕೀಳಿನ ಜಾತಿಗೋಡೆಗಳು ನಿರ್ಮಾಣವಾಗಿ ನಮ್ಮ ದೇಶ ಎಷ್ಟೊಂದು ಸಮಸ್ಯೆಗಳನ್ನು ಎದುರಿಸುತ್ತಿಲ್ಲ? ಅಂಥದರಲ್ಲಿ ಗೊರವಪ್ಪಗಳ ಜಾತಿ ವಿರೋಧಿ ಪರಂಪರೆ ನಮಗೊಂದು ಆದರ್ಶವಾಗಿ ಕಾಣಬಲ್ಲದು.

ಮೈಲಾರ, ಏಳ್ಕೋಟೆ, ಗೊರವ, ಮಾಳಚಿ ಮೊದಲಾದ ಪದಗಳು ನಮ್ಮ ಪ್ರಾಚೀನ ಶಾಸನ, ಕಾವ್ಯ ಶಾಸ್ತ್ರಗಳಲ್ಲಿ ಕಂಡುಬರುತ್ತವೆ. ಸಾವಿರಾರು ವರ್ಷಗಳ



ಪವಿತ್ರ ಚಪ್ಪಲಿಗಳಿಗೆ ಪೂಜೆ

ಹಿಂದಿನಿಂದ ಈ ಪದ್ಧತಿ ಇದ್ದು ಬಂದಿದೆ ಎಂಬುದಕ್ಕೆ ಇದೇ ಸಾಕ್ಷಿ. ಹಿಂದೆ ಕಾಳಾಮುಖ ಎಂಬ ಶೈವ ಪಂಥವಿತ್ತು. ಅದನ್ನೇ ಏಳ್ಕೋಟೆ ಸಮಯ ಎಂದಿದ್ದಾರೆ. ಕಾಳಾಮುಖ ಗುರುಗಳು ವಿದ್ಯೆಯಲ್ಲಿ ಪ್ರಖ್ಯಾತರಾಗಿದ್ದರು. ಶೈವ ದೇಗುಲಗಳಿಗೆ ಆಚಾರ್ಯರಾಗಿ, ಮಠಗಳ ಅಧಿಪತಿಗಳಾಗಿ, ವಿದ್ಯಾಕೇಂದ್ರಗಳನ್ನು ಸ್ಥಾಪಿಸುತ್ತಿದ್ದರು. ಅವರಿಗೂ ಮೈಲಾರ ಪಂಥಕ್ಕೂ ಖಂಡಿತವಾಗಿ ಸಂಬಂಧವಿದೆ.

ಅದೋ ನೋಡಿ. "ಏಳು ಕೋಟಿ ಏಳುಕೋಟ್ಯೋಗ್ಯೋ ಚಾಂಗಬಲೊ ಚಾಂಗ ಬಲೊ', ಎಂಬ ಕೂಗು ದಶದಿಕ್ಕುಗಳಲ್ಲಿ ಮೊಳಗುತ್ತಿದೆ. ಏನು ಹೀಗೆಂದರೆ? ಜನ ಕಟ್ಟಿದ ಕಥೆಗಳನ್ನು ವಿದ್ವಾಂಸರು ಪುಸ್ತಕಗಳಲ್ಲಿ ದಾಖಿಲುಗೊಳಿಸಿರುವಂತೆ ತಿರುಪತಿ ತಿಮ್ಮಪ್ಪನ ಏಳು ಕೋಟಿ ರೂಪಾಯಿ ಸಾಲದ ಪ್ರಸಂಗವೇ ಆ ಕಥೆ. ಮೈಲಾರ ಪಂಥದಲ್ಲಿ ಹಿಗ್ಗಪ್ಪನ ಪಾತ್ರವಿರುವುದರಿಂದ, ಅವನನ್ನೇ ತಿಮ್ಮಪ್ಪನೆಂದು ಸಾಧಿಸುವ ಪ್ರಯತ್ನವಿದೆ. ಅವನನ್ನು ಮೈಲಾರಲಿಂಗನ ಮಂತ್ರಿ ಎನ್ನಲಾಗುತ್ತದೆ. ಚಿಕ್ಕಯ್ಯ ದೊಡ್ಡಯ್ಯರು ಮೈಲಾರನ ಮಕ್ಕಳು ತಾನೆ? ಗಂಗಿ ಮಾಳಮ್ಮ ಹೆಂಡಂದಿರು. ಇಷ್ಟ ಪರಿವಾರದೊಂದಿಗೆ, ಮೈಲಾರಲಿಂಗನ ರೋಚಕ ಜೀವನ ಪ್ರಸಂಗಗಳನ್ನು ಮಣಿಕಾಸುರ, ಮಲ್ಲಾಸುರರನ್ನು ಕೊಂದ ಪ್ರಸಂಗದ ಜತೆ ತಳಕು ಹಾಕಿ, ಜಾತ್ರೆಯ ವಿಧಿಗಳನ್ನು ಪೂರೈಸಲಾಗುತ್ತದೆ.

ಏಳು ಎಂಬುದು ವಲಸೆಗಾರ ದ್ರಾವಿಡರ ಮಧ್ಯ ಅತ್ಯಂತ ಪವಿತ್ರವಾದ ಸಂಖ್ಯೆ. ಕುರುಬರು, ಗೊಲ್ಲರು, ಬೇಡರು, ಒಕ್ಕಲಿಗರು, ಗೊಂಡರು, ಕಮ್ಮಾ, ಕಾಪುಗಳು ಇವರೇ ಮೊದಲಾದ ಇಂದಿನ ಅಸಂಖ್ಯ ಜಾತಿ ಜನವರ್ಗಗಳು ಮೂಲದಲ್ಲಿ ವಲಸೆಗಾರ ಬುಡಕಟ್ಟುಗಳ ದ್ರಾವಿಡರು. ಇವರ ಮಧ್ಯೆ ಪವಿತ್ರ ಏಳರ ಪ್ರಸ್ತುತ ಹಲವು ಹತ್ತು ಬಗೆಗಳಲ್ಲಿ ಮೇಲಿಂದ ಮೇಲೆ ಬರುತ್ತದೆ. ಏಳು ಹಟ್ಟಿ, ಏಳು ಕುರಿ, ಏಳು ತಾಯಂದಿರು, ಏಳು ಮಕ್ಕಳು, ಏಳು ಸೋದರರು, ಇತ್ಯಾದಿ 'ಕೋಟಿ' ಎನ್ನುವುದು ಸಂಖ್ಯಾವಾಚಕವಲ್ಲ. ಅಂದಿನ ಕಾಲದಲ್ಲಿ ಸಾಧಾರಣ ರೂಪದ ಕೋಟೆಗಳನ್ನು ನಿರ್ಮಿಸುತ್ತ ಅದರಲ್ಲಿಯ ಹುತ್ತಗಳನ್ನು ನಾಶಮಾಡಿ ಸ್ಥಾವರ ಮೈಲಾರಲಿಂಗನನ್ನು ಸ್ಥಾಪಿಸುತ್ತ ಬಂದರು ವಲಸೆಗಾರ ಪಶುಪಾಲಕರು. ಹಾಗಾಗಿ ಈತ' ಏಳುಕೋಟೆ'.ಯವ. ಇವನಿಗೆ ಜಯವಾಗಲಿ, ತನ್ಮೂಲಕ ತಮಗೆ ವಿಜಯವಿರಲಿ ಎಂದು ಹಾರೈಸುತ್ತಾರೆ ಭಕ್ತ ಜನ.

ಮೈಲಾರ ಸಾಮಾನ್ಯವಾಗಿ ಜನವರಿ ಕೊನೆ, ಫೆಬ್ರವರಿ ಮೊದಲ ವಾರಗಳಲ್ಲಿ ಜಾತ್ರೆಯಿಂದ ವಿಜೃಂಭಿಸುತ್ತದೆ. ಮೈಲಾರ ಮಾರ್ತಾಂಡನ ಕಡುಬಿನ ಕಾಳಗ, ಡೆಂಕಣ ಮರಡಿ ಆರೋಹಣ, ಧ್ವಜಾರೋಹಣ, ತ್ರಿಶೂಲ ಪೂಜೆ, ಗುಪ್ತ ಸಮಾಧಿ, ಕಾರ್ಣಿಕ, ಸರಪಳಿ ಪವಾಡ, ಉಗಣೆ ಗೂಟದ ಪವಾಡ ಮೊದಲಾದ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪ್ರಾಚೀನ ಕುರುಬರ ಇತಿಹಾಸದ ಅವಶೇಷಗಳನ್ನು ಗುರುತಿಸಬಹುದಾಗಿದೆ. ಕರಿಯಾಲದ ಮರ, ನಾಯಿ ಕುದುರೆ, ಕರಡಿ, ಶಿಬಾರ, ಹುತ್ತಗಳ ಪೂಜೆಗಳಲ್ಲಿ ಮೈಲಾರ ಪಂಥದ ವಿಶೇಷತೆಯಿದ್ದು, ವಲಸೆಗಾರ ಸಂಸ್ಕೃತಿಯು ಮೂಲ ಕೃಷಿಕರ ಮೇಲೆ ಧಾಳಿ ಮಾಡಿದ ಆಶಯಗಳಿಂದ ತುಂಬಿವೆ.

ಮೈಲಾರ-ಖಂಡೋಬ ಪಂಥದ ವಿವರಗಳನ್ನು ಸವಿಸ್ತಾರವಾಗಿ ಸಂಗ್ರಹಿಸಿರುವ ಡಾ। ನೇಗಿನಹಾಳರು ಕರ್ನಾಟಕದಲ್ಲಿ ಹದಿನಾಲ್ಕು ಮೈಲಾರ ಕ್ಷೇತ್ರಗಳು ಖ್ಯಾತವಾಗಿವೆ ಎನ್ನುತ್ತಾರೆ. ಅವು ಬೀದರ ಜಿಲ್ಲೆಯ ತೆಂಬೇರ, ಯಾದಗಿರಿ, ದೇವರ ಹಿಪ್ಪರಿಗಿ, ಗುಡೂರು ಬೀಳಗಿ, ಮಂಗಸೂಳಿ, ಕಾರಿಮನಿ, ಕಪ್ಪತಗುಡ್ಡ, ದೇವರಗುಡ್ಡ, ಹಿರೇ ಮೈಲಾರ, ಆನೆಗೊಂದಿ, ಮೈಲಾರ ಪಟ್ಟಣ, ಮುಡುಕುತೊರೆ, ಹೊನ್ನಾವರ. ಆದರೆ ೩೦೦ರಷ್ಟು ಸಣ್ಣ ದೊಡ್ಡ ದೇಗುಲಗಳಿರುವ ಪ್ರಸ್ತಾಪವೂ ಇದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಮೈಲಾರದ ಕೇಂದ್ರ ಸ್ಥಾನಗಳು ಹಾಗೂ ಕುರುಬ ಜನಾಂಗ ಬಹು ವ್ಯಾಪಕವಾಗಿ ಹರಡಿಕೊಂಡಿದ್ದಕ್ಕೆ ಈ ಸಂಖ್ಯೆ ಸಾಕ್ಷಿ ನೀಡುತ್ತದೆ.

ಮೈಲಾರನ ಪಂಥದ ಇತರ ವಿವರಗಳನ್ನು ಅಭ್ಯಾಸ ಮಾಡಿದರೆ ಈ ವಿಷಯ ಹೆಚ್ಚು ಖಚಿತವಾಗುತ್ತದೆ. ಕಪಿಲಮುನಿ ಮತ್ತು ಗೋವನಿಯ ವಂಶಸ್ಥರಾದ 'ಒಡೆಯರು', ಮೈಲಾರ ಕ್ಷೇತ್ರದ ಯಜಮಾನರು. ದೇವಸ್ಥಾನಕ್ಕೆ ಸಂಬಂಧಿಸಿದ ಶ್ರೀಮುಖ ಅಥವಾ ಬಿರುದಾವಳಿ ಇವರಲ್ಲಿದೆ. ಇವರು ಮೂಲದಲ್ಲಿ ಬಳ್ಳಾರಿ ಆಚೆಯ ಮೀನಗೊಂದಿಯವರು. ಕಪಿಲಮುನಿ ಮೀನಗೊಂದಿಯಿಂದ ಮೈಲಾರಕ್ಕೆ ಬಂದು ಹುತ್ತದ ಮಣ್ಣು ತೆಗೆದು ಒಳಗಿನ ಲಿಂಗವನ್ನು ಪೂಜಿಸಿದನೆಂದು ಕಥೆ

ಇದೆ. ಮೈಲಾರನ ಮೂರ್ತಿ ಹುತ್ತದ ಮಣ್ಣಿನಿಂದ ಆದುದರಿಂದಲೇ ಮಣ್ಣು ಮೈಲಾರ ಎಂದು ಈ ಕ್ಷೇತ್ರಕ್ಕೆ ಹೆಸರಾಯಿತು. ಎಲ್ಲ ಕ್ಷೇತ್ರಗಳ ಮೈಲಾರಲಿಂಗನು ಖಡ್ಗ, ಡಮರು, ತ್ರಿಶೂಲ, ಬಟ್ಟಲು ಹಿಡಿದಿರುವುದು ಸಾಮಾನ್ಯ. ಅವನ ಪಾದದಡಿ ಮಣಿಮಲ್ಲಾಸುರ ರುಂಡವೂ ಇರುತ್ತದೆ. ಲಿಂಗದೇವರು ಖಡ್ಗ, ತ್ರಿಶೂಲ ಹಿಡಿದಿರುವುದರ ಅರ್ಥ ಈ ಜನಾಂಗ ಯುದ್ಧ ಮಾಡುತ್ತ ಬಂದರೆಂದು, 'ಡಮರು', ತಮ್ಮ ಸಂತೋಷಕ್ಕಾಗಿ ಬಾರಿಸುತ್ತ, ಕುಣಿಯುತ್ತಿದ್ದುದನ್ನು ಸೂಚಿಸುವುದು. ಗುರುಮನೆತನದ ಒಡೆಯರು. ಮೈಲಾರನ ಪ್ರತಿನಿಧಿಯಂತೆ, ಕುದುರೆ ಏರಿ, ಕಾರ್ಣಿಕದ ಸ್ಥಳಕ್ಕೆ ಬರುವ, ಭಕ್ತರ ಹರಕೆ ಒಪ್ಪಿಸುವ, ಹೊರೆ ಹೊರೆಸುವ, ಹಬ್ಬ ಜಾತ್ರೆಗಳ ಆಡಳಿತ ನೋಡುವ ಜವಾಬ್ದಾರಿ ಹೊಂದಿದ್ದಾರೆ. ಗೊರವಪ್ಪಗಳಿಗೆ ದೀಕ್ಷೆಯನ್ನು ಕೊಡುವವರೂ ಇವರೇ. ಕಂಚಾವೀರರು. ಇವರ ಎದುರೇ ಖಡ್ಗ ಹೇಳುತ್ತಾರೆ. ಇವರ ನೇತೃತ್ವದಲ್ಲೇ ಜಾತ್ರೆ ಉತ್ಸವಾದಿಗಳೆಲ್ಲ ಜರುಗುವುದು ನಿಯಮ.

ನಾವು ಮೈಲಾರನ ಜಾತ್ರೆಯನ್ನು ಮಾತ್ರ ಇಲ್ಲಿ ಬರೆಯುತ್ತಿದ್ದರೂ ಕೂಡ, ವರ್ಷದ ಎಲ್ಲ ಹುಣ್ಣಿಮೆಗಳು ಅಮಾವಾಸ್ಯೆಗಳಂದು ಒಂದಿಲ್ಲೊಂದು ವಿಧದ ಉತ್ಸವಗಳು ಜರುಗುತ್ತಲೇ ಇರುತ್ತವೆ. ಇವುಗಳಲ್ಲಿ ಅಸಂಖ್ಯ ಜನ ಸೇರಿ ಜಾತ್ರೆಗೆ ಎಲ್ಲಿಲ್ಲದ ಮಹತ್ವ ಬಂದಿದೆ. ವರ್ಷವಿಡೀ ನಡೆಯುವ ಈ ಹಬ್ಬ, ಉತ್ಸವ ಆಚರಣೆಗಳಿಗೆ ಏನಾದರೂ ಅರ್ಥವಿರಲೇ ಬೇಕಲ್ಲವೆ? ಜನರ ನಂಬಿಕೆ ಮತ್ತು ಆಚರಣೆಗಳ ಹಿಂದೆ, ಯಾವುದೊ ಅನುಭವ ಹುದುಗಿರಬೇಕಲ್ಲವೆ? ಅದನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಏಕೆಂದರೆ ಜಾತ್ರೆಯ ಮಹತ್ವ ಈ ಎಲ್ಲ ಆಚರಣೆಗಳಿಗೆ ನಿಕಟವಾಗಿ ಸಂಬಂಧಿಸಿದೆ.

ವರ್ಷದ ಪ್ರಾರಂಭವಾಗುವುದು ನಮ್ಮಲ್ಲಿ ಯುಗಾದಿಯಿಂದ ಎಂಬುದು ಎಲ್ಲರಿಗೂ ತಿಳಿದಿದೆ. ಮೈಲಾರದಲ್ಲಿ ಯುಗಾದಿ ಪಾಡ್ಯದಂದು ಹಡದಿ ಹೊರಡುವ

ಕಾರ್ಯಕ್ರಮ ನಡೆಯುತ್ತದೆ. ದೇವಸ್ಥಾನದಲ್ಲಿ ಅಂದು ಬೆಳಿಗ್ಗೆ ಪೂಜೆ ಮಾಡಿ ಊರಿನ ಎಲ್ಲ ದೇಗುಲಗಳಿಗೆ ಪಲ್ಲಕ್ಕಿಯಲ್ಲಿ ದೇವರನ್ನು ಕೊಂಡೊಯ್ದು ಪೂಜೆ ಮಾಡಿಕೊಂಡು ಬರುವುದು. ಬೆಲ್ಲ ಮತ್ತು ನವಣಿ ಹಿಟ್ಟನ್ನು ಇರುವೆ ಹುತ್ತಗಳಿಗೆ ಹಾಕುತ್ತ ಬರುವುದು ಕಾರ್ಯಕ್ರಮ. ಮೇಳದಲ್ಲಿ ಬ್ರಾಹ್ಮಣ ಅರ್ಚಕ, ಒಡೆಯರು, ಗೊರವರು, ಮಾಲಗಾರರೂ ಇರುತ್ತಾರೆ.

ಆಗಿ ಹುಣ್ಣಿಮೆಯಂದು ಮೈಲಾರನಿಗೂ ಗಂಗಿಮಾಳಮ್ಮನಿಗೂ ಲಗ್ನವನ್ನು ನೆರವೇರಿಸುತ್ತಾರೆ. ಮಾನವರ ಲಗ್ನದ ಎಲ್ಲ ಕ್ರಮಗಳನ್ನು ಅನುಸರಿಸುತ್ತಾರೆ. ರೈತರಿಗೆ ಉಪಯುಕ್ತವಾಗುವ ಒಂದು ಆಚರಣೆಯೂ ಈ ಸಂದರ್ಭದಲ್ಲಿ ಜರುಗುತ್ತದೆ. ವೈಶಾಖ ಶುದ್ಧ ಪಾಡ್ಯದಂದು ನದಿದಂಡೆಯ ಮಣ್ಣು ತಂದು ಒಂಬತ್ತು ಧಾನ್ಯಗಳನ್ನು ಹೊಸ ಮಡಕೆಗಳಲ್ಲಿ ಅಗಿ ಹೊಯ್ಯುತ್ತಾರೆ. ಅವು ಹುಣ್ಣಿಮೆ ಅಷ್ಟೊತ್ತಿಗೆ ಸಮೃದ್ಧವಾಗಿ ಚಿಗಿತು ನಿಂತಿರುತ್ತವೆ. ಅವುಗಳಲ್ಲಿ ಯಾವ ಧಾನ್ಯ ಕಳಕಳಿಸುತ್ತಿರುವುದೊ ಅದನ್ನೆ ಆ ವರ್ಷ ಬೆಳೆಯಬೇಕು ಎಂದು ರೈತರು ನಿರ್ಧರಿಸುತ್ತಾರೆ.

ಆದಿ ಕಾಲದಲ್ಲಿ ಕುರುಬರು ಬೇಟೆಗಾರರಾಗಿದ್ದು, ನಂತರ ಪಶುಪಾಲಕರಾಗಿ ಪರಿವರ್ತಿತವಾದರು. ಮುಂದಿನ ಕಾಲದಲ್ಲಿ ಕೃಷಿಯನ್ನು ಅನುಸರಿಸುತ್ತ ಬಂದರು. ಈ ಬೆಳವಣಿಗೆಯ ಕ್ರಮ ಬರಿ ಕುರುಬರಲ್ಲಷ್ಟೇ ಅಲ್ಲ, ಎಲ್ಲ ಜನಾಂಗದಲ್ಲೂ ಇತ್ತು. ಈ ಕ್ರಮಕ್ಕೆ ಅನುಸಾರವಾಗಿ ಮೈಲಾರನ ಪಂಥಗಳ ಆಚರಣೆಗಳಿರುವುದು ಕುತೂಹಲಕರವಾಗಿದೆ. ಅಂದರೆ ಅಂದಿನ ಕಾಲದಿಂದಲೂ ಕುರುಬರು ತಮ್ಮ ಸಾಮಾಜಿಕ ಬೆಳವಣಿಗೆಯ ರೀತಿಯನ್ನು ಹಬ್ಬ, ಉತ್ಸವ, ಜಾತ್ರೆಗಳ ರೂಪದಲ್ಲಿ ಈಗಲೂ ನೆನಪಿಸಿಕೊಳ್ಳುತ್ತ ಬಂದಿದ್ದಾರೆ. ಉದಾಹರಣೆಗೆ ಶೀಗೀ ಹುಣ್ಣಿಮೆಯ ನಂತರದ ಏಳನೆಯನೇ ದಿನಕ್ಕೆ ಮೈಲಾರನ ಕುದುರೆ ಹಬ್ಬ ನಡೆಯುತ್ತದೆ. ಬೆಳಗಿನ ನಾಲ್ಕು ಗಂಟೆಗೆ ಕುದುರೆ ಏರಿ, ಮಲ್ಲಯ್ಯ ಬೇಟೆಗೆ ಹೊರಡುತ್ತಾನೆ. ಮಲ್ಲಯ್ಯ ಎಂಬ

ಪದವೇ ಮಲೆ+ಅಯ್ಯ ಎಂಬ ಎರಡು ಪದಗಳಿಂದಾಗಿದೆ. 'ಮಲೆ', ಎಂದರೆ ಬೆಟ್ಟ. ಬೆಟ್ಟದಲ್ಲಿದ್ದಾಗ ಬೆಟ್ಟದ ಅಯ್ಯನನ್ನು ಪೂಜೆ ಮಾಡುತ್ತಿದ್ದ ಜನ ಪಶುಪಾಲಕರಾಗಿ ಹುಲ್ಲುಗಾವಲಿಗೆ ಬಂದಾಗ ಅವನನ್ನು ಗೊರವನ ರೂಪದಲ್ಲಿ ಕಾಣುತ್ತಾರೆ. ಮಣಿಮಲ್ಲನನ್ನು ನಾಶ ಮಾಡಲು ಅವನು ಗೊರವನ ರೂಪ ಧರಿಸಿದ್ದಾಗಿ ನಂಬುತ್ತಾರೆ. ಕುದುರೆ ಹಬ್ಬದಂದು ಹುಲಿಬೇಟೆಗೆ ಹೊರಡುವ ಮೈಲಾರ ಕುರಬಲೆಯ ಮನೆಗೆ ಹೋಗುತ್ತಾನೆ. ಇದೆಲ್ಲವನ್ನೂ ಹೇಗೆ ಅಭಿನಯಿಸಲಾಗುತ್ತದೆಂಬ ಕುತೂಹಲವಲ್ಲವೆ?

ಕಟ್ಟಿಗೆಯ ಕುದುರೆಯ ಮೇಲೆ ಉತ್ಸವ ಮೂರ್ತಿಯನ್ನು ಬಿಗಿಯಾಗಿ ಕಟ್ಟಿ ಚಿಕ್ಕ ಬಂಡಿಯ ಮೇಲೆ ಇವನ್ನಿಟ್ಟು ಪಲ್ಲಕ್ಕಿಯೊಂದಿಗೆ ಹೊರಡುತ್ತಾರೆ. ಲಂಗುಲಗಾಮಿಲ್ಲದೆ ಬಂಡಿ, ರಭಸದಿಂದ ಓಡಿ ಶಿಬಾರದ ಹತ್ತಿರ ಕುರುಬತ್ತೆವ್ವನ ಕಟ್ಟೆಗೆ ಬರುತ್ತದೆ. ಅಲ್ಲಿ ಮಂಗಳಾರತಿ ಆಗುತ್ತದೆ. ಒಡೆಯರು ಹುಲಿ ಹೊಡೆದುದರ ಸಂಕೇತವಾಗಿ ಮೂರು ಅಂಬು ಬಿಡುತ್ತಾರೆ.

ಅಂದಿನ ಮೈಲಾರ, ಇಂದಿನ ಮಾನವ ಜೀವಗಳ ಪ್ರತೀಕವೇ. ಏಕೆಂದರೆ ಮಲ್ಲಯ್ಯ ತಿರುಗಿ ಮನೆಗೆ ಬಂದಾಗ ಸಿಟ್ಟಾದ ಗಂಗಮ್ಮ ಬಾಗಿಲು ತೆಗೆಯುವುದೇ ಇಲ್ಲ. ಕುರುಬತ್ತೆವ್ವನ ಹತ್ತಿರ ತನ್ನ ಗಂಡ ಹೋಗಿ ಬಂದದ್ದನ್ನು ತಿಳಿದ ಆಕೆಗೆ ಕೋಪ ಬಂದಿದೆ. ತೊಡೆ ಮೇಲೆ ಚಿಕ್ಕಯ್ಯ ಜುಂಜಯ್ಯ ಇದ್ದಾರೆಂದು ನೆವ ಹೇಳುತ್ತಾಳೆ. ಮಲ್ಲಯ್ಯ ತಪ್ಪಾಯಿತೆಂದ ಮೇಲೆಯೇ ಆಕೆ ಬಾಗಿಲು ತೆರೆಯುವುದು. ಹೀಗೆ ಉತ್ಸವ ಮೂರ್ತಿ ದೇಗುಲದೊಳಗೆ ಪ್ರವೇಶಿಸಿ ಪೂಜೆಗೊಳ್ಳುತ್ತದೆ.

ಭಟ್ಟಿ ಅಮಾವಾಸ್ಯೆ ಮೈಲಾರ ಪಂಥದಲ್ಲಿ ಅತ್ಯಂತ ಪ್ರಶಸ್ತವಾದ ದಿನ. ಏಕೆಂದರೆ ಭಕ್ತರ ನಂಬಿಕೆ ಎಂದರೆ ಶಿವ ಕೈಲಾಸದಿಂದ ಭೂಲೋಕಕ್ಕೆ ಸ್ವಯಂಭುವಾಗಿ, ಅವತರಿಸಿದ್ದೇ ಅಂದು. ಅವನ ಜತೆಗೆ ಪವಿತ್ರವಾದ ಭಂಡಾರವೂ ಹುಟ್ಟಿತು.

ಭಂಡಾರ ಔಷಧಿ ಗುಣವುಳ್ಳ ಅರಿಶಿನದಿಂದ ಮಾಡಿದೆ. ಕುರುಬರ ಮೂಲ ಪುರುಷರಾದ ಗೊಂಡರು ಅರಿಸಿನವನ್ನು ಬೆಳೆಯುತ್ತಾರೆ. ಇದು ಫಲ ಕೊಡಲಿಕ್ಕೆ ಎರಡು ವರ್ಷ ಬೇಕಾಗುತ್ತದೆ. ಗೊಂಡರಲ್ಲೂ ಅರಿಶಿನಕ್ಕೆ ಬಹಳ ಮಹತ್ವದ ಸ್ಥಾನವಿದೆ. ಐದು ಜನ ಗೊರವಿಯರು ನದಿ ಸ್ನಾನ ಮಾಡಿ ಶುಚಿರ್ಭೂತರಾಗಿ ಉಪವಾಸವಿದ್ದು, ಅರಿಶಿನ ಕೊಂಬುಗಳನ್ನು ಕುಟ್ಟಿ ಕರಿಎಳಿ (ಉಣ್ಣೆ) ಬಂಗಾರ, ಬೆಳ್ಳಿ, ಮುತ್ತು, ಹವಳ ಸೇರಿಸಿ ಭಂಡಾರವನ್ನು ತಯಾರಿಸುತ್ತಾರೆ. ಅದನ್ನು ತಟ್ಟೆಯಲ್ಲಿ ಹೂಗಳಿಂದ ಅಲಂಕರಿಸಿ ಮೆರವಣಿಗೆಯಲ್ಲಿ ಗುಡಿಗೆ ತರುತ್ತಾರೆ. ಒಡೆಯರು ಪತ್ನಿಸಮೇತರಾಗಿ ಮೆರವಣಿಗೆಯಲ್ಲಿ ಬರುತ್ತಾರೆ. ಗೊರವರು ಡಮರು ನುಡಿಸುತ್ತಿರುತ್ತಾರೆ. ಅಲ್ಲಲ್ಲಿ ಕಂಚಿವೀರರು ಒಡಪು ಹೇಳುತ್ತಾರೆ. ಕುದುರೆಗೆ, ಗಂಗಿ ಮಾಳಮ್ಮನಿಗೆ, ಪೂಜೆ ಮಾಡಿ ಭಂಡಾರವನ್ನು ಅರ್ಪಿಸಿ, ಲಿಂಗಕ್ಕೆ ಪೂಜೆ ಮಾಡಿ ಸಾವಿರದ ಒಂದು ಹಿಡಿ ಅರಿಶಿನ ಅರ್ಪಿಸುತ್ತಾರೆ. ಕಂಬಳಿ ಗದ್ದುಗಿಯ ಮೇಲೆ ಭಂಡಾರದಿಂದ ತ್ರಿಶೂಲವನ್ನು ರಚಿಸಿ ಆರತಿ ಮಾಡುತ್ತಾರೆ. ದೀಪ ಹಚ್ಚಿ ಬೀಗ ಹಾಕಿಕೊಂಡು ಮನೆಗೆ ಬರುತ್ತಾರೆ. ಮರುದಿನ ಒಡೆಯರು ಗೊರವರು ಭಕ್ತರು ಸಹಿತ ಗುಡಿಗೆ ಬಂದು ಬೀಗ ತೆರೆದು ನೋಡಿದರೆ, ಭಂಡಾರದ ರಾಶಿ ಒಡೆದು ಸೀಳಿರುತ್ತದೆ. ದೇವರು ಅದನ್ನು ಸ್ವೀಕರಿಸಿ ತೃಪ್ತನಾದನೆಂದು ಭಾವಿಸುತ್ತಾರೆ. ಈ ಭಂಡಾರವನ್ನು ಒಡೆಯರು ಬಾಬುದಾರರಿಗೆ, ಗೊರವರಿಗೆ ಹಂಚುತ್ತಾರೆ. ಈ ಭಂಡಾರವೇ ವರ್ಷದುದ್ದಕ್ಕೂ ಬಳಕೆ ಆಗುತ್ತಿರಬೇಕು ಎಂಬುದು ನಿಯಮ.

ಹೀಗೆ ಅನೇಕ ಆಚರಣೆಗಳು ಕೃಷಿ ಜೀವನಕ್ಕೆ ಪಶುಪಾಲಕ ಬದುಕಿಗೆ, ಅಂಟಿಕೊಂಡು ಆರಾಧನೆಯ ರೂಪದಲ್ಲಿ ಪ್ರಕಟವಾಗುತ್ತವೆ.

ಭರತ ಹುಣ್ಣಿವೆಯಲ್ಲವೆ ಇಂದು. ನೋಡಿ ಪೂರ್ವದ ಶುಭ್ರ ಆಕಾಶದಲ್ಲಿ ಚಂದಿರ ಎಷ್ಟು ಅಂದವಾಗಿ ಮೇಲೇರಿ ಬರುತ್ತಿದ್ದಾನೆ. ಅನುಕೂಲಕರವಾದ ಹವಾಮಾನ. ಆರೋಗ್ಯಪೂರ್ಣವಾದ ವಾತಾವರಣ. ಪ್ರಕೃತಿಯ ಅದ್ಭುತ ಸೌಂದರ್ಯ. ಭಕ್ತರೆಲ್ಲ

ದೇವರ ಗುಡ್ಡಕ್ಕೆ ಹೋಗಿ ಹಣ್ಣುಕಾಯಿ ಮಾಡಿಕೊಂಡು, ಮೈಲಾರ ಜಾತ್ರೆಗೆ ಬಂದಿದ್ದಾರೆ. ಗುಡ್ಡ ಸುತ್ತಿ ಮೈಲಾರಕ್ಕೆ ಬಂದಂತೆ ಎಂಬ ಗಾದೆಯೆ ಈ ಕಾರಣದಿಂದ ಹುಟ್ಟಿದರೂ ವಿಭಿನ್ನ ಸಂದರ್ಭಗಳಲ್ಲಿ ಅದು ಬಳಕೆ ಆಗುತ್ತಲಿದೆ. ದೇವರ ಗುಡ್ಡ ಹೊಳೆಯಾಚೆ ಇದೆ. ಮಣ್ಣು ಮೈಲಾರ ತುಂಗಭದ್ರ ದಂಡೆಯ ಬಯಲಿನಲ್ಲಿ. ಭಾರತ ಹುಣ್ಣಿಮೆಯ ಜಾತ್ರೆ ಕಾರ್ಣಿಕೋತ್ಸವವೆಂದೇ ಪ್ರಖ್ಯಾತವಾಗಿದೆಯಲ್ಲವೆ?

ದೇವರು ಮೈಲಾರಗುಡಿಯಿಂದ ನೇರ ಪೂರ್ವದಿಕ್ಕಿಗಿರುವ ಡೆಂಕಣಮರಡಿಗೆ ಮೌನ ಸವಾರಿ ಹೊರಟು, ಮಲ್ಲಾಸುರನನ್ನು ವಧಿಸಬೇಕಾಗಿದೆ. ಈ ಪ್ರಧಾನ ಕ್ರಿಯೆ ಅನೇಕ ಉಪಕ್ರಿಯೆಗಳಿಂದ ಕೂಡಿದೆ.

ಮೊದಲು ರಥಸಪ್ತಮಿಯಂದು ದೇಗುಲದ ಮುಂದಿನ ಕಟ್ಟೆ ಬದಿಗೆ ಕಾಕುಳ್ಳು ಉರಿಸಿ ಹಾಲುಕ್ಕಿಸುತ್ತಾರೆ. ಉಕ್ಕಿದ ದಿಕ್ಕಿಗೆ ಬೆಳೆ ಸಮೃದ್ಧವಾಗುತ್ತದೆಂದು ನಂಬುತ್ತಾರೆ. ಅದಕ್ಕೆ ಅಕ್ಕಿ ಬೆಲ್ಲ ಹಾಕಿ, ಪಾಯಸ ಮಾಡಿ ಪ್ರಸಾದದಂತೆ ಹಂಚುತ್ತಾರೆ. ಇದು ಬಹುಶಃ ಮೈಲಾರ ಉಂಡು ಯುದ್ಧಕ್ಕೆ ಹೊರಡುವ ತಯ್ಯಾರಿ. ಸಂಜೆ ಮೌನವಾಗಿ ಮೆರವಣಿಗೆಯಲ್ಲಿ ದೇವರು ಹೆಗ್ಗಪ್ಪ, ಗಂಗಿಮಾಳಮ್ಮರ ಜತೆ ಡೆಂಕಣಮರಡಿಗೆ ಬರುತ್ತಾನೆ. ಹನ್ನೊಂದು ದಿನಗಳವರೆಗೂ ಗುಡಿಯಲ್ಲಿ ಗಂಟೆ ಬಾರಿಸುವಂತಿಲ್ಲ. ಸವಾರಿ ಗುಡ್ಡದಲ್ಲೇ ಬೀಡು ಬಿಟ್ಟಿರುತ್ತದೆ. ಮರಡಿಯಲ್ಲಿ ಹನ್ನೊಂದು ದಿನ ಉಪವಾಸವಿರುವ ಕಾರಣಿಕ ಗೊರವ ಹಾಗೂ ಇತರ ಗೊರವರು ನಿಶಾನಿಯನ್ನು ಕಾಯುತ್ತಿರುವರು. ಭಕ್ತರು ಮರಡಿಯಲ್ಲೇ ದೋಣಿ ತುಂಬಿಸುತ್ತಿರುವರು. ಕಡುಬಿನ ಕಾಳಗವೂ ಬರಿ ಮೋಜಿನ ಸಂಗತಿಯಲ್ಲ. ಅದರಲ್ಲೂ ಇತಿಹಾಸದ ಯಾವುದೋ ತುಣುಕು ಅಡಗಿರಬೇಕು. ಕುದುರೆಪ್ಪನಿಗೆ ಅರ್ಪಿಸುವ ಗುಗ್ಗರಿ ಹಬ್ಬ, ಕಿಚಡಿ ಹಬ್ಬಗಳು ನಡೆದೇ ಇರುತ್ತವೆ.

ಹನ್ನೊಂದನೇ ದಿನ ಬೆಳಿಗ್ಗೆ ಮಲ್ಲಿಸುರನ ವಧೆಗೆ ಒಡೆಯರಾದಿಯಾಗಿ ಎಲ್ಲರೂ ಮೌನವಾಗಿ ದೇವರನ್ನು ಹೊತ್ತು ತಂದು, ಮರಡಿಗೆ ಬರುವರು. ಮುಚ್ಚಿ ತಂದ ಮಲ್ಲಾಸುರನ ಮುಖವನ್ನು ಈಗ ಎಲ್ಲರಿಗೂ ಕಾಣಿಸುವಂತೆ ಹೊರಳಿಸಿಡುವರು. ಅಂದರೆ ತುಬಾಕಿ ಗುಂಡು ಹಾರಿಸಿದ ಕೂಡಲೆ ವಧೆಯಾಯಿತೆಂದು ಲೆಕ್ಕ. ಆಗ ನೆರೆದ ಎಲ್ಲರೂ "ಏಳು ಕೋಟೆಗ್ಯೋ ಚಾಂಗಬಲೊ', ಎಂದು ಕೂಗುವರು. ಡಮರುಗಳ ಮತ್ತು ಇತರ ವಾದ್ಯಗಳ ಸದ್ದು ಜೋರಾಗುವುದು. ಶಿಬಾರದ ಕಟ್ಟೆಯ ಸುತ್ತಸುತ್ತಿ ದೇವರನ್ನು ಪ್ರತಿಷ್ಠಾಪಿಸುವರು. ಗೊರವರ ಕುಣಿತ, ಕುದುರೆಕಾರರ ಚಬುಕ ಸೇವೆ, ಭಕ್ತರ ಹಣ್ಣುಕಾಯಿ ಸೇವೆ ಪ್ರಾರಂಭವಾಗುವವು.

ಅಂದು ಸಂಜೆ ಒಡೆಯರು ದೇವರನ್ನು ರಾಜವೈಭವದಲ್ಲಿ ಮರಡಿಯಿಂದ ಕಾರಣಿಕ ಹೇಳುವ ಬಯಲಿಗೆ ತರುತ್ತಾರೆ. ಕಾರಣಿಕ ಗೊರವಪ್ಪ ಈಗ ಮುಖ್ಯ ಪಾತ್ರಧಾರಿ. ಹತ್ತಾರು ಜನ ಗೊರವರು ಹೊತ್ತು ತಂದ ಉದ್ದನೆಯ ಬಿದಿರ ಬಿಲ್ಲನ್ನು ವಿಶಾಲವಾದ ಬಯಲಿನ ಮಧ್ಯೆ ಪೊಲೀಸರ ಕಾವಲಿನಲ್ಲಿ ನಿಲ್ಲಿಸಲಾಗುವುದು. ಇದೇ ಜಾತ್ರೆಯ ಸಹಸ್ರ ಸಹಸ್ರ ಸಂಖ್ಯೆಯ ಜನ ಬಯಲಿನಲ್ಲಿ ಮರಡಿಯಲ್ಲಿ ಸ್ಥಳ ಸಿಕ್ಕ ಕಡೆ ಎಲ್ಲೆಂದರಲ್ಲಿ ನೆರೆಯುತ್ತಾರೆ. ಇದು ನಿಜವಾಗಿಯೂ ಅದ್ಭುತ ರಮ್ಯ ದೃಶ್ಯ. ಜನಸಾಗರದ ಮಧ್ಯೆ ಸರಸರನೆ ಬಿಲ್ಲೇರಿ ನಿಂತ ಗೊರವಪ್ಪ 'ಸದ್ದಲೆ', ಎಂದು ಕೂಗಿದ ಕೂಡಲೆ ಜನ ಮೌನವಾಗುವ ಘಟನೆ ರೋಮಾಂಚನಕಾರಿಯಾದುದು. ಆಕಾಶದ ಕಡೆ ನೋಡಿ, ಗೊರವಪ್ಪ ಒಂದು ವಾಕ್ಯವನ್ನು ಹೇಳಿ ಬಿದ್ದು ಬಿಡುತ್ತಾನೆ. ಕೆಳಗೆ ನಿಂತಿರುವ ಗೊರವಪ್ಪಗಳು ಅವನನ್ನು ಹಿಡಿದು ಮಲಗಿಸುತ್ತಾರೆ. ದೂರ ದೂರದಲ್ಲಿ ನಿಂತಿರುವ ಜನಕ್ಕೆ, ಗೊರವಪ್ಪ ಹೇಳಿದ್ದು ಕಿವಿಯಿಂದ ಕಿವಿಗೆ ದಾಟಿಕೊಂಡು ಬರುತ್ತದೆ. 'ಆಕಾಶಕ್ಕೆ ಗುಂಡು ಬಿದ್ದತ್ತಲೆ ಪರಾಕ್', ಮೊದಲಾದ ಅರವತ್ತು ವಾಕ್ಯಗಳಿವೆಯಂತೆ. ಅವುಗಳ ನಿಗೂಢ ಅರ್ಥ ಬರುವ ಕಾರ್ಣಿಕದವರೆಗಿನ ಕಾಲಕ್ಕೆ



ಕಂಬದ ಮೇಲೆ ಕಾರಣಿಕ ಹೇಳುತ್ತಿರುವ ಗೊರವಪ್ಪ

ಅನ್ವಯಿಸುತ್ತದೆಂದು ಮಾತಾಡಿಕೊಳ್ಳುತ್ತ ಜನ ತಮ್ಮ ತಾತ್ಕಾಲಿಕ ನೆಲೆಗಳಿಗೆ ಮರಳುತ್ತಾರೆ.

ಮೈಲಾರ ಜಾತ್ರೆಯಲ್ಲಿ ಅತ್ಯವಶ್ಯಕವಾಗಿ ಗಮನಿಸಬೇಕಾದ ಒಂದು ಸಂಗತಿ ಎಂದರೆ ಜಾತಿ, ಮತ, ಪಂಥಗಳನ್ನು ಮರೆತು ಜನ ಒಂದೇ ಬೃಹತ್ ಕುಟುಂಬದವರಂತೆ, ಸ್ನೇಹ, ಸಹಕಾರ, ಸಹನೆಗಳಿಂದ ನಡೆದುಕೊಳ್ಳುವುದು. ಜಾತ್ರೆಗೆ ಲಕ್ಷಗಟ್ಟಲೆ ಜನ ಸೇರಿದರೂ ಗಲಭೆ, ಗಲಾಟೆಗೆ ಅವಕಾಶವಿರುವುದಿಲ್ಲ. ಜಾತಿಯ ಮೇಲು-ಕೀಳು ಇಲ್ಲಿ ನಾಶವಾಗಿ ಹೋಗುತ್ತವೆ. ಎಲ್ಲರೂ ಸರಿಸಮಾನರು ಎಂಬ ಭಾವನೆ ವ್ಯಾಪಕವಾಗಿರುತ್ತದೆ. ದೇಶದಲ್ಲಿ ಕೋಮು ಗಲಭೆ, ಜಾತಿ ವೈಷಮ್ಯಗಳು ಹೆಚ್ಚುತ್ತಿರುವ ಇಂದಿನ ಕಾಲದಲ್ಲಿ, ಈ ದೃಷ್ಟಿಯಿಂದ ಮೈಲಾರನ ಜಾತ್ರೆ ಒಂದು ಒಳ್ಳೆಯ ಮಾದರಿಯಾಗಬಲ್ಲದು.

ತಾವು ಬೀಡುಬಿಟ್ಟ ಕಡೆಯ ಬಯಲುಗಳಲ್ಲಿ ಭಕ್ತರು ಕಂಬಳಿ ಗದ್ದುಗೆ ಮಾಡಿ, ದೇವರ ಸಾಧನಗಳನ್ನು ಇಟ್ಟು ಪೂಜಿಸಿ, ಕುದುರೆ ಸೇವೆ ಸಲ್ಲಿಸುವ

ದೃಶ್ಯ ಸಾಮಾನ್ಯ. ಧಾರ್ಮಿಕದತ್ತಿ ಇಲಾಖೆಯವರು ಗುಡಿಯ ಪಕ್ಕದ ಕೋಣೆಯಲ್ಲಿ ತಾತ್ಕಾಲಿಕವಾಗಿ ಬೀಡು ಬಿಟ್ಟು ಜಾತ್ರೆಯ ಭೌತಿಕ ಉಸ್ತುವಾರಿ ನೋಡಿಕೊಳ್ಳುತ್ತಿರುತ್ತಾರೆ. ಅವರು ಮೈಕಿನಲ್ಲಿ ಕಾರಣಿಕ ವಾಕ್ಯವನ್ನು ಮೇಲಿಂದ ಮೇಲೆ ಹೇಳುತ್ತಿರುತ್ತಾರೆ. ಭಕ್ತರು ಪೂಜೆ ಚೀಟುಗಳನ್ನು ಹಣ ಕೊಟ್ಟು ಇಲ್ಲಿಯೇ ಪಡೆದುಕೊಂಡು ಗುಡಿಗೆ ಹೋಗುತ್ತಾರೆ.

ಸಂಭ್ರಮ, ಉತ್ಸಾಹ, ವೈಭವ ಆಡಂಬರಗಳಿಂದ ಜರುಗುವ ಮೈಲಾರನ ಜಾತ್ರೆಯ ಎಲ್ಲ ವಿವರಗಳನ್ನೂ ನೀಡಿದ್ದೇನೆಂದು ಭಾವಿಸಬೇಕಾಗಿಲ್ಲ. ನಿಮ್ಮಂತೆ ನನಗೂ ಕಣ್ಣುತಪ್ಪಿ ಎಷ್ಟೋ ವಿಷಯಗಳು ಉಳಿದು ಹೋಗಿರಬಹುದು. ಮತ್ತೆ ಮುಂದಿನ ಸಲ ಎಲ್ಲರೂ ಹೋಗಿ ಈ ಘಟನೆಗಳನ್ನು ನೋಡಿ ತಿಳಿದುಕೊಳ್ಳಬೇಕಲ್ಲವೆ?

* * *

ಕನ್ನಡ ವಿಶ್ವವಿದ್ಯಾಲ
ದವರೆಗೆ ಉತ್ತಮ
ಹಾಗೂ ಉಪಯು
ಪುಸ್ತಕ ರಚನಾ
ವಿಭಾಗ'ವನ್ನು ತೆ
ಪುಸ್ತಕ ರಚನೆ
ಮಾಡಬೇಕೆಂದು ಬ
ನವಸಾಕ್ಷರರಿಗಾಗಿ
ಪುಸ್ತಕ ಬರೆಸುವ
ವಹಿಸಿಕೊಟ್ಟರು.
ವಿಶ್ವವಿದ್ಯಾಲಯವು
ತ ಲೇಖಕರನ್ನು,
ಭಾಷಾತಜ್ಞರನ್ನು,
ರ ಅಭಿಪ್ರಾಯ,
ಸಲಹೆ, ಸಹಕಾರಗ
ಮುದ್ರಣ ವಿನ್ಯಾಸ,
ಚಿತ್ರಗಳ ಮಹತ್ವ
ಕ ಸಲ ಚರ್ಚಿಸಿ
ಯೋಜನೆಯನ್ನು

ನವಸಾಕ್ಷರರಿಗಾಗಿ
ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ
ಭಾಷಾತಜ್ಞರಿಂದ
ಪರಿಶೀಲಿಸಲಾಯಿ
ಕೊಂಡು ಅವರಿಗೆ
ಕಮ್ಮಟಗಳನ್ನು
ಆಯ್ದ ಜಿಲ್ಲೆ,
ತಾಲೂಕುಗಳಿಗೆ
ಅವರಿಂದ ಅದರ
ಗುಣದೋಷಗಳ
ವಿಶ್ವವಿದ್ಯಾಲಯದ
ಗಣಕಯಂತ್ರದಲ್ಲಿ
ನಾಯಕರು ನೀಡಿದ್ದ
ಮಾಹಿತಿಗಳನ್ನೆಲ್ಲ
ಣವಾಗಿ ವಿಷಯದ
ಆದ್ಯತೆಗಳನ್ನು ನಿ
ಲೇಖಕರು ನಮ್ಮ
ವಿಶ್ವವಿದ್ಯಾಲಯದ
ರೂಪ ಕೊಟ್ಟರು.
ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು